ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಜನವರಿ 2023

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-24 ಸಂಚಿಕೆ-1 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23



## ಶೃಂಗೇರಿ ಜಗದ್ಗುರುಗಳ ಉಡುಪಿ ಭೇಟಿ

ಶ್ರೀಮತ್ ಪರಮಹಂಸಪರಿವ್ರಾಜಕಾಚಾರ್ಯವರ್ಯೇತ್ಯಾದ್ಯನೇಕ ಬಿರುದಾವಲೀ ಸಮಲಂಕೃತರಾದ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾಪೀಠಾಧೀಶ್ವರ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥಮಹಾಸ್ವಾಮಿಗಳ ಮತ್ತು ತತ್ಕರಕಮಲಸಂಜಾತರಾದ ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸ್ವಾಮಿಗಳ ಪರಮಾನುಗ್ರಹಪುರಸ್ಸರ ಆಶೀರ್ವಾದಗಳಿಂದ ಸ್ವಸ್ತಿ। ಶ್ರೀ ಶಾಲಿವಾಹನಶಕವರ್ಷ 1944 ಶುಭಕೃತ್ ನಾಮ ಸಂವತ್ಸರದ ಫಾಲ್ಗುಣ ಶುದ್ಧ ಏಕಾದಶಿ ದಿನಾಂಕ 03.03.2023 ಶುಕ್ರವಾರ ಪ್ರಾತಃಕಾಲ 8.00 ಗಂಟೆಗೆ ಶುಭ ಮೀನಲಗ್ನದಲ್ಲಿ ಶ್ರೀ ಶಾರದಾಂಬೆಯ ನೂತನ ಕೃಷ್ಣಶಿಲಾಬಿಂಬದ ಪ್ರತಿಷ್ಠಾಪನೆ – ಬ್ರಹ್ಮಕುಂಭಾಭಿಷೇಕ ಇವುಗಳನ್ನು ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ಅಮೃತಹಸ್ತದಿಂದ ಸಂಪನ್ನಗೊಳಿಸುವುದೆಂದು ಸಂಕಲ್ಪಿಸಿದ್ದೇವೆ. ಆಸ್ತಿಕಬಂಧುಗಳಾದ ತಾವೆಲ್ಲ ಈ ಮಹತ್ಕಾರ್ಯದಲ್ಲಿ ಪಾಲ್ಗೊಂಡು ತನುಮನಧನಗಳಿಂದ ಸಹಕರಿಸಿ ಶ್ರೀ ಶಾರದಾಂಬೆಯ ಹಾಗೂ ಶ್ರೀ ಜಗದ್ಗುರುಗಳ ಅಪಾರಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

–ಅಧ್ಯಕ್ಷರು ಮತ್ತು ಆಡಳಿತ ಮಂಡಳಿ.

ಆ ಪ್ರಯುಕ್ತ ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸ್ವಾಮಿಗಳವರು ತಾ.02.03.2023ರಿಂದ ತಾ.03.03.2023ರ ವರೆಗೆ ಶ್ರೀಶಾರದಾ ಮಂಟಪದಲ್ಲಿ ಮೊಕ್ಕಾಂ ಇರುತ್ತಾರೆ. ಅವರ ಕಾರ್ಯಕ್ರಮಗಳ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

### ಶ್ರೀ ಶೃಂಗೇರಿ ಶಂಕರ ಮಠ, ಉಡುಪಿ ಶಾಖೆ ಇದರ ನಿವೇಶನಕ್ಕೆ ಧನಸಹಾಯ ನೀಡಿದವರು

| | | |
|---|---|---|
| 1 | ಡಾ. ಸಿ.ಜಿ. ರಮೇಶ್ ರಾವ್, ಉಡುಪಿ | 1,01,000 |
| 2 | ಶ್ರೀ ರಘುವೀರ್ ಆರ್. ರಾವ್, ನಾಸಿಕ್ | 1,00,000 |
| 3 | ಶ್ರೀಮತಿ ಸುಜಾತ ಬೆಳ್ಳೆ, ಮಂಗಳೂರು | 1,00,000 |
| 4 | ಶ್ರೀ ಬಿ.ಜೆ. ರಾವ್, ಉಡುಪಿ | 10,000 |
| 5 | ಶ್ರೀಮತಿ ಸಹನ ಬೆಳ್ಳೆ, ಯು.ಎಸ್.ಎ. | 1,00,000 |
| 6 | ಶ್ರೀ ನಿರಂಜನ್ ಬೆಳ್ಳೆ, ಉಡುಪಿ | 5,00,000 |
| 7 | ಶ್ರೀ ಕೆ.ಕೆ. ಶರ್ಮ, ಕಾರ್ಕಳ | 5,004 |
| 8 | ಶ್ರೀ ವಿವೇಕ್ ಪಿ. ಸಂತೂರ್ಕರ್, ಪುಣೆ | 50,000 |
| 9 | ಶ್ರೀ ರವಿರಾಜ್ ರಾವ್, ಜರ್ಮನಿ | 50,000 |
| 10 | ಡಾ. ಎಸ್. ವಿಜಯ್ ಕುಮಾರ್ ಶಾಸ್ರಿ, ಬೆಂಗಳೂರು | 1,00,000 |
| 11 | ಶ್ರೀಮತಿ ರಾಜೇಶ್ವರಿ ವಿ. ಶಾಸ್ತ್ರಿ, ಬೆಂಗಳೂರು | 1,00,000 |
| 12 | ಶ್ರೀ ವಿಜಯ ಕುಮಾರ್ ರಾವ್ | 5,000 |
| 13 | ಶ್ರೀ ಶರತ್ ಅಕಿರೇಕಾಡು, ಪೂಗವನ | 10,000 |
| 14 | ಶ್ರೀ ಗಿರೀಶ್ ರಾವ್, ಬೆಂಗಳೂರು | 3,00,000 |
| 15 | ಶ್ರೀ ಪ್ರಸನ್ನ ಕುಮಾರ್ ಬೆಳ್ಳೆ, ಬೆಂಗಳೂರು | 1,00,000 |
| 16 | ಶ್ರೀಮತಿ ಪದ್ಮಲತಾ ಪಿ. ಸಂತೂರ್ಕರ್, ಪುಣೆ | 50,000 |
| 17 | ಶ್ರೀ ಸಂದೀಪ್ ಶಾಸ್ತ್ರಿ, ಇಂಗ್ಲೆಂಡ್ | 2,00,000 |
| 18 | ಶ್ರೀ ವಾಗೀಶ ಎಸ್. ಶಾಸ್ತ್ರಿ, ಉಡುಪಿ | 2,00,000 |
| 19 | ಶ್ರೀ ಎಂ. ರಾಜೇಂದ್ರ ರಾವ್, ಬೆಂಗಳೂರು | 1,00,000 |
| 20 | ಡಾ. ನಾಗರತ್ನ ಶಾಸ್ತ್ರಿ, ಉಡುಪಿ | 1,00,000 |
| 21 | ಶ್ರೀಮತಿ ಉಮಾ ವಿ. ಶಾಸ್ತ್ರಿ, ಉಡುಪಿ | 1,00,000 |
| 22 | ಶ್ರೀ ದಿವಾಕರ್ ರಾವ್ ಎಸ್, ಮಂಗಳೂರು | 1,00,000 |
| 23 | ಶ್ರೀ ಭಾಗ್ಯಚಂದ್ರ ರಾವ್, ಬೆಂಗಳೂರು | 1,00,000 |
| 24 | ಶ್ರೀ ಶೈಲೇಶ್ ಕುಮಾರ್ ಆರ್. ರಾವ್, ಬೆಂಗಳೂರು | 50,000 |
| 25 | ಶ್ರೀಮತಿ ವೇದವಲ್ಲಿ ಪಿ.ಸುದರ್ಶನ ರಾವ್, ಬೆಂಗಳೂರು | 1,00,000 |
| 26 | ಶ್ರೀ ಬಿ.ವಿ. ರಾವ್, ಬೆಂಗಳೂರು | 5,000 |
| 27 | ಶ್ರೀ ವಿನಯ್ ಪಿ. ಸಂತೂರ್ಕರ್, ಯು.ಎಸ್.ಎ. | 4,900 |

ಶ್ರೀಮಠದ ಭಕ್ತರಿಂದ ಹೆಚ್ಚಿನ ಧನ ಸಹಾಯವನ್ನು ನಿರೀಕ್ಷಿಸುತ್ತಾ ಈ ಮಹಾತ್ಕಾರ್ಯಕ್ಕೆ ಸಮಾಜದ ಪ್ರತಿಯೊಬ್ಬರೂ ದಾನಿಗಳಾಗಬೇಕಾಗಿ ಅಪೇಕ್ಷೆ.

–ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ, ಧರ್ಮಾಧಿಕಾರಿಗಳು, ಉಡುಪಿ

(ಮುಂದುವರಿಯುವುದು....)




ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


## ಬೆಳ್ತಂಗಡಿಯಲ್ಲಿ ಜಾಗತಿಕ ಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶ

2023ನೇ ಇಸವಿ, ಮಾರ್ಚ್ ತಿಂಗಳ 4 ಹಾಗೂ 5ನೇ ತಾರೀಕಿನಂದು ಬೆಳ್ತಂಗಡಿಯ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ನೇತೃತ್ವದಲ್ಲಿ ಹಾಗೂ ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಇವರ ಆಶಯದಲ್ಲಿ ಜಾಗತಿಕ ಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶವು ವಿಜೃಂಭಣೆಯಿಂದ ನೆರವೇರಲಿದೆ. ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳು ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರ ಹೆಗ್ಗಡೆಯವರ ಆಶೀರ್ವಾದ ಹಾಗೂ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮಗಳು ಜರಗಲಿವೆ. ನಮ್ಮೆಲ್ಲಾ ಸಮಾಜ ಬಾಂಧವರು ಬೇರೆ ಯಾವುದೇ ಕಾರ್ಯಕ್ರಮವನ್ನು ಇಟ್ಟುಕೊಳ್ಳದೆ ಕುಟುಂಬ ಸಮೇತರಾಗಿ ಭಾಗವಹಿಸುವುದರ ಜೊತೆಗೆ ತನು ಮನ ಧನಗಳ ಸಂಪೂರ್ಣ ಸಹಕಾರದೊಂದಿಗೆ ಈ ಸಮಾವೇಶವನ್ನು ಯಶಸ್ವಿಗೊಳಿಸಬೇಕಾಗಿ ಸಮಾಜ ಬಾಂಧವರಲ್ಲಿ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಹಾಗೂ ಬೆಳ್ತಂಗಡಿ ಸಂಘದ ಪದಾಧಿಕಾರಿಗಳು ವಿನಂತಿಸಿದ್ದಾರೆ.



ತಾ.30.12.2022ರಂದು ಉಡುಪಿಯ ಶಾರದಾ ಮಂಟಪದಲ್ಲಿ ತಮ್ಮ ವೈವಾಹಿಕ ಜೀವನದ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡ ಶ್ರೀ ಸಿ.ಎಸ್.ರಾವ್ ದಂಪತಿಗಳಿಗೆ ಸಂಘದ ಆಡಳಿತ ಮಂಡಳಿಯ ವತಿಯಿಂದ ಅಭಿನಂದಿಸಲಾಯಿತು.

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ – 576 102.

## ಮಹಾಶಿವರಾತ್ರಿಯ ಆಮಂತ್ರಣ



ಭಕ್ತಾಭಿಮಾನಿಗಳೇ,

ತಾ.18-02-2023, ಬುಧವಾರ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 9 ಗಂಟೆಯಿಂದ ರುದ್ರ ಪಾರಾಯಣ, ರುದ್ರಾಭಿಷೇಕ, ಲಲಿತಾ ಸಹಸ್ರನಾಮ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಲಘುಪಹಾರದೊಂದಿಗೆ ಪ್ರಸಾದ ವಿತರಣೆ ನಡೆಯಲಿದೆ.

ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

–ಆಡಳಿತ ಮಂಡಳಿ

# ನಿತ್ಯೋತ್ಸವ ಕಂಡ ಬಾರಕೂರು–ನನ್ನ ಅನಿಸಿಕೆಗಳು –ಎನ್.ಪದ್ಮನಾಭ ರಾವ್

ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಬಾರಕೂರು ಬಹಳ ಪ್ರಾಚೀನ ಇತಿಹಾಸ ಹೊಂದಿದ್ದು ಅಲ್ಲಿನ ಮಹತ್ವದ ಸ್ಥಳಗಳಾದ ಕೋಟೆ, ಕೊತ್ತಲಗಳು, ಗುಡಿ ಗೋಪುರಗಳು, ಶಿಲಾ ಶಾಸನಗಳು ಇವುಗಳ ಶಿಥಿಲಾವಸ್ಥೆ ಮತ್ತು ಅವ್ಯವಸ್ಥೆಗಳ ಬಗ್ಗೆ ಛಾಯಾಚಿತ್ರಗಳ ಮೂಲಕ ತುಲನಾತ್ಮಕವಾಗಿ ಹಾಗೂ ವಿವರಣಾತ್ಮಕವಾಗಿ ಮತ್ತು ವಿಮರ್ಶಾತ್ಮಕವಾಗಿ ವಿಶದೀಕರಿಸುವ ಮೂಲಕ ಶ್ರೀಯುತ ಮೋಹನ ರಾಯರು ತಮ್ಮ ಆಳವಾದ ಅಧ್ಯಯನ ಮುಖಾಂತರ ಗ್ರಂಥವನ್ನು ವಿಶಿಷ್ಟ ರೂಪದಲ್ಲಿ ಬರೆದು ಪ್ರಕಟಿಸಿದ್ದಾರೆ. ತುಳುನಾಡಿನ ರಾಜಧಾನಿಯಾಗಿ ಮೆರೆದ ಕೀರ್ತಿ ಹಾಗೂ ತುಳುನಾಡಿನ ಹಂಪೆ ಎಂದು ಖ್ಯಾತಿ ಪಡೆದ ವಿಚಾರ ಈಗ ಇತಿಹಾಸವಾಗಿದೆ. ಇದು ಬಾರಕೂರಿನಲ್ಲಿರುವ ಹತ್ತು ಹಲವು ವಿಷಯ–ವಿಚಾರಗಳ ವೈಶಿಷ್ಟ್ಯತೆಯನ್ನು ಸಾರುವುದು. ಇದಕ್ಕೆ ಪೂರಕವಾಗಿ ಅಲ್ಲಿರುವ ವೈವಿಧ್ಯಮಯ ಪುರಾತನ, ಧಾರ್ಮಿಕ, ಚಾರಿತ್ರಿಕ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ, ವಾಣಿಜ್ಯ ಹಾಗೂ ಪ್ರವಾಸಿ ವೈಚಾರಿಕ ವಿಷಯಗಳನ್ನು ವಿಶದೀಕರಿಸಿದಂತೆ ಬಾರಕೂರಿನ ಸರ್ವಾಂಗೀಣ ಗತ ವೈಭವವು ಉನ್ನತ ಮಟ್ಟದಲ್ಲಿ ಇತ್ತು ಎಂದು ನಾವು ಗೃಹಿಸಬಹುದು. ಹೀಗಾಗಿ ಬಾರಕೂರು ತುಳುನಾಡಿನ ರಾಜಧಾನಿಯಾಗಿ ಪ್ರಖ್ಯಾತಿ ಹೊಂದಿತ್ತು ಎಂದು ಭಾವಿಸಬಹುದು.




ದಿ. ಡಾ. ಬಿ. ವಸಂತ ಶೆಟ್ಟಿಯವರು ಬಾರಕೂರಿನ ಇತಿಹಾಸದ ಬಗ್ಗೆ ಆಳವಾದ ಅಧ್ಯಯನ ಮಾಡಿ ಆ ವಿಷಯದಲ್ಲಿ ಡಾಕ್ಟರೇಟ್ ಪಡೆದು ವಿಶೇಷವಾದ ಕಾಣಿಕೆಯನ್ನು ನೀಡಿರುವರು. ಅವರ ಸ್ನೇಹ, ಸಹಕಾರ, ಪ್ರೋತ್ಸಾಹವನ್ನು ಎಂದೂ ಮರೆಯಲಾಗದೆ ಅವರ ನೆನಪಿಗೆ ಈ ಪುಸ್ತಕವನ್ನು ವೈ.ಮೋಹನ ರಾವ್ ಅವರಿಗೆ ಅರ್ಪಿಸಿದ್ದಾರೆ. ಅಲ್ಲದೆ ಈ ಸ್ಥಳದ ಇತಿಹಾಸದ ಕುರಿತು ಇತಿಹಾಸ ತಜ್ಞರಾದ ಡಾ. ಪಿ. ಗುರುರಾಜ ಭಟ್ಟರು ಅಧ್ಯಯನ ನಡೆಸಿದ ಪ್ರಮುಖರು ಮತ್ತು ಡಾ. ಕಯ್ಯಾರ ಕಿಞ್ಞಣ್ಣ ರೈಯವರು ಭೂತಾಳಪಾಂಡ್ಯ ಶಿರೋನಾಮೆಯಲ್ಲಿ ಜಯಪಾಂಡ್ಯನು ಬಾರಕೂರಿನ ದೊರೆಯಾಗಿ ಆಳಿದ ಕುರಿತು ಮನೋಜ್ಞವಾಗಿ ವಿಶದೀಕರಿಸಿರುತ್ತಾರೆ. ಪೇಜಾವರ ಸದಾಶಿವ ರಾಯರು ಬಾರಕೂರಿನ ಚರಿತ್ರೆಯ ಕುರಿತು ತುಳುನಾಡಿನ ಹಂಪೆಯಾಗಿ ಮೆರೆದ ಬಾರಕೂರು ಈಗಿದು ಕೊಳೆಕೊಂಪೆಯಾಗಿದೆ ಎಂದು ಹೃದಯಂಗಮವಾಗಿ ವಿವರಿಸಿದ್ದಾರೆ.

‘ಹೊನ್ನುಡಿ’ಯಲ್ಲಿ ಡಾ. ಬಿ. ಜಗದೀಶ ಶೆಟ್ಟಿಯವರು, ಈ ಪುಸ್ತಕದಲ್ಲಿ ಲೇಖಕರು ಬಾರಕೂರಿನ ಐತಿಹ್ಯದ ಕುರಿತು ದಾಖಲಿಸಿರುವುದು ಬಹಳ ಮೆಚ್ಚುವಂತಹುದು ಮತ್ತು ಸಾಮಾನ್ಯ ಓದುಗರಿಗೆ ಸುಲಭ ರೀತಿಯಲ್ಲಿ ಗ್ರಾಹ್ಯವಾಗುವಂತೆ ಬರೆದಿರುವುದು ಸ್ವಾಗತಾರ್ಹ ಎಂದು ಮೆಚ್ಚುಗೆಯನ್ನು ಹೇಳಿರುವುದು, ಲೇಖಕರು ವಾಣಿಜ್ಯ ಪ್ರಾಧ್ಯಾಪಕರಾಗಿದ್ದರೂ ಇತಿಹಾಸ ತಜ್ಞರಾಗಿ ಆಸಕ್ತಿ ತೋರಿ ಶ್ರಮವಾಗಿ ವಿವರಿಸಿರುವುದು ವಿಶಿಷ್ಟವಾಗಿದೆ. ದಿ. ವಿಶ್ವನಾಥ ಶಾಸ್ತ್ರಿಯವರ ಆ ಛಾಯಾಗ್ರಹಣದ ನಾಲ್ನೂರಕ್ಕೂ ಹೆಚ್ಚು ಛಾಯಾಚಿತ್ರಗಳು ಸ್ಫುಟವಾಗಿ ಆಕರ್ಷಕವಾಗಿದ್ದು ಅನೇಕ ಛಾಯಾ ಚಿತ್ರಗಳು ಪುಸ್ತಕದ ಕಳೆಯನ್ನೂ ಹೆಚ್ಚಿಸಿದೆಯಲ್ಲದೆ, ಅದರಿಂದ ವಿಷಯ ವಿಚಾರಗಳಿಗೆ ಪೂರಕವಾಗಿ ಮಾಹಿತಿಗೆ ಪೋಷಣೆಯನ್ನು ನೀಡಿದೆ ಎಂದು ಹೇಳಬಹುದು. ಅವರ ಉಪಕಾರ ಸ್ಮರಣೆಯನ್ನು ಈ ಪುಸ್ತಕದ ಮೂಲಕ ವೈ. ಮೋಹನ್ ರಾವ್ ರವರು ಮಾಡಿದ್ದಾರೆ.

ಒಟ್ಟಿನಲ್ಲಿ ಲೇಖಕರಾದ ಶ್ರೀ. ವೈ. ಮೋಹನ ರಾಯರು ವೃತ್ತಿಯಲ್ಲಿ ವಾಣಿಜ್ಯ ಶಾಸ್ತ್ರ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದು ಈಗ ಪ್ರವೃತ್ತಿಯಲ್ಲಿ ಇತಿಹಾಸ ತಜ್ಞರಾಗಿ ಆಸಕ್ತಿವಹಿಸಿ ಬರೆದ ಈ ಪುಸ್ತಕ ಅವರ ಆಳವಾದ ಅಧ್ಯಯನ, ನಿರೂಪಣೆ ಹಾಗೂ ವಿವರಣೆ ಸರಳ ಸುಂದರವಾಗಿದ್ದು ಸುಲಭ ಗ್ರಾಹ್ಯವಾಗಿಯೂ ಮನಮುಟ್ಟುವಂತಿದೆ. ಅಲ್ಲದೆ, ಈ ಗ್ರಂಥವು ವಿವರಣಾತ್ಮಕವಾಗಿದ್ದು ಅಧ್ಯಯನ ರೂಪದಿಂದ ಕೂಡಿದ ಸಂಶೋಧನಾ ಶೈಲಿಯಲ್ಲಿ, ವಿಶಿಷ್ಟ ರೀತಿಯಲ್ಲಿ ರೂಪುಗೊಂಡಿರುವ ಕೃತಿಯಾಗಿ ಹೊರಹೊಮ್ಮಿದೆ. ಅವರಿಂದ ಇನ್ನೂ ಹೆಚ್ಚಿನ ಮೇರು ಕೃತಿಗಳು ಬೆಳಕು ಚೆಲ್ಲಲಿ ಎಂದು ಹಾರೈಸುವೆನು.

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ| ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

## ಕಾಪು ತಾಲೂಕು 4ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಂಪನ್ನ



ಕಾಪು ತಾಲೂಕು 4ನೇ ಕನ್ನಡ ಸಾಹಿತ್ಯ ಸಮ್ಮೇಳನ ಕಳೆದ ಡಿಸೆಂಬರ್ ತಿಂಗಳಲ್ಲಿ ನೆರವೇರಿದ್ದು, ಯಶಸ್ವೀ ಸಮ್ಮೇಳನದ ಕಾರ್ಯದರ್ಶಿಯಾಗಿ ಅವಿರತ ಕಾರ್ಯನಿರ್ವಹಿಸಿದ್ದ ಕೃಷ್ಣ ಕುಮಾರ್ ರಾವ್ ಮಟ್ಟು ಅವರನ್ನು ಸಮ್ಮೇಳನದ ಕಾರ್ಯಾಧ್ಯಕ್ಷ ಡಾ| ದಯಾನಂದ ಪೈ ಜೊತೆಗೂಡಿ ಹಾರ, ಶಾಲು, ಫಲಪುಷ್ಪ, ಸ್ಮರಣಿಕೆಯೊಂದಿಗೆ ಸನ್ಮಾನಿಸಲಾಯಿತು. ಸ್ಥಳೀಯ ಎಸ್.ವಿ.ಎಸ್ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಮ್ಮೇಳನ ಅಧ್ಯಕ್ಷರಾದ ಶ್ರೀಮತಿ ಕ್ಯಾಥರೀನ್ ರೋಡ್ರಿಗಸ್, ಅದಾನಿ ಯು.ಪಿ.ಸಿ.ಎಲ್. ಘಟಕದ ಅಧ್ಯಕ್ಷ ಡಾ| ಕಿಶೋರ್ ಆಳ್ವ, ಮಾಜಿ ಸಚಿವ ಶ್ರೀ ವಿನಯ್‌ಕುಮಾರ್ ಸೊರಕೆ, ಉಡುಪಿ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಚಂದ್ರಗೌಡ ಡಿ.ಎಚ್. ಕಾಪು ಕಸಾಪ ಅಧ್ಯಕ್ಷ ಶ್ರೀ ಪುಂಡಲೀಕ ಮರಾಠೆ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

## ಸಿ.ಎಸ್.ರಾವ್ ಅವರ ‘ಸರ್ವೋತ್ತಮ’ ಕೃತಿ ಬಿಡುಗಡೆ



ಉಡುಪಿ ಜಿಲ್ಲಾ ಹಿರಿಯ ನಾಗರಿಕ ಸಂಘದ ಅಧ್ಯಕ್ಷರೂ, ಕಾರ್ಪೊರೇಶನ್ ಬ್ಯಾಂಕಿನ ನಿವೃತ್ತ ಡಿಜಿಎಂ ಶ್ರೀ ಸಿ.ಎಸ್.ರಾವ್ ಅವರು ಬರೆದ ಆತ್ಮಚರಿತ್ರೆ ‘ಸರ್ವೋತ್ತಮ’ ಕೃತಿಯನ್ನು ಭೋಪಾಲದ ಜಾಗ್ರಣ್ ಲೇಕ್ ಸಿಟಿ ವಿಶ್ವವಿದ್ಯಾನಿಲಯದ ಉಪಕುಲಪತಿ, ಖ್ಯಾತ ರಾಜಕೀಯ ವಿಶ್ಲೇಷಕ ಪ್ರೊ. ಸಂದೀಪ್ ಶಾಸ್ತ್ರಿ ಅವರು ಉಡುಪಿಯ ಶ್ರೀ ಶಾರದಾ ಮಂಟಪದ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಇತ್ತೀಚೆಗೆ ಲೋಕಾರ್ಪಣೆಗೈದರು. ಬ್ರಹ್ಮಾವರ ಎಸ್.ಎಂ.ಎಸ್. ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ| ವೈ. ರವೀಂದ್ರ ನಾಥ ರಾವ್ ಕೃತಿ ಪರಿಚಯ ಮಾಡಿದರು. ಲೇಖಕ ಶ್ರೀ ಸಿ.ಎಸ್. ರಾವ್ ಕೃತಿ ರಚನೆಯ ಹಿನ್ನಲೆಯನ್ನು ವಿವರಿಸಿದರು. ಉಡುಪಿ ಜಿಲ್ಲಾ ಬಳಕೆದಾರರ ವೇದಿಕೆಯ ಅಧ್ಯಕ್ಷರಾದ ಶ್ರೀ ವಿ.ಪಿ. ಕೊಡಂಚ ಅಧ್ಯಕ್ಷ ಸ್ಥಾನವಹಿಸಿದ್ದರು. ಒಟ್ಟು 160 ಪುಟಗಳ, ಇಂಗ್ಲಿಷ್ ಭಾಷೆಯಲ್ಲಿರುವ ಈ ಕೃತಿಯು ಸಿ.ಎಸ್. ರಾಯರ ಬದುಕಿನ ವೃತ್ತಾಂತ, ವ್ಯಕ್ತಿತ್ವದ ವಿವಿಧ ಆಯಾಮಗಳು, ಕಾರ್ಪೊರೇಶನ್ ಬ್ಯಾಂಕಿನ ಸಾಂಸ್ಥಿಕ ಇತಿಹಾಸ, ಆಗಿನ ಸಮಾಜದ ವ್ಯವಸ್ಥೆಗಳ ವಿಷಯಗಳನ್ನು ಒಳಗೊಂಡಿದ್ದು ಮುಂದಿನ ಜನಾಂಗಕ್ಕೆ ಉಪಯುಕ್ತ ಮಾಹಿತಿ ನೀಡುತ್ತದೆ. ಕು| ಸಿಂಚನಾ ರಾವ್ ಸ್ವಾಗತಿಸಿದರು. ಶ್ರೀ ಸಿದ್ಧಾರ್ಥ ರಾವ್, ಶ್ರೀಮತಿ ಸುಚಿತ್ರಾ ರಾವ್ ಮತ್ತು ಶ್ರೀಮತಿ ಸ್ಮೃತಿ ರಾವ್ ಅತಿಥಿಗಳನ್ನು ಪರಿಚಯಿಸಿದರು. ಶ್ರೀಮತಿ ಸುನಂದಾ ರಾವ್ ಉಪಸ್ಥಿತರಿದ್ದರು. ಶ್ರೀ ಸಂಜಯ ರಾವ್ ವಂದಿಸಿದರು.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS

Sri Balaji Complex, Shop No-G-7,
Near KSRTC Bus Stand,
Udupi - 576101.

City Towers, Service Bus Stand,
Near Rao and Rao Circle, State Bank,
Mangalore - 575001

Branch at Mahalaxmi Prabha Complex, Market Road, Opp Tajmahal Hotel, Karkala

## ಪಡುಬಿದ್ರಿ ಶ್ರೀ ಕ್ಷೇತ್ರ ಉದಯಾದ್ರಿಯಲ್ಲಿ ಎಳ್ಳಮಾವಾಸ್ಯೆ ಜಾತ್ರೆ ಸಂಪನ್ನ



ತಾ. 23.12.2022 ರ ಶುಕ್ರವಾರದಂದು ಶ್ರೀ ಕ್ಷೇತ್ರದಲ್ಲಿ ಎಳ್ಳಮಾವಸ್ಯೆ ಜಾತ್ರೆಯು ಅದ್ದೂರಿಯಿಂದ ಸಂಪನ್ನಗೊಂಡಿತು. ತಾ. 08.12.2022 ರ ದತ್ತ ಹುಣ್ಣಿಮೆಯಿಂದ ಪ್ರತಿ ದಿನ ರಾತ್ರಿ 7 ಗಂಟೆಗೆ ಸಾರ್ವಜನಿಕ ರಂಗಪೂಜಾ ಸೇವೆಯು ತಾ. 23.12.2022ರ ಎಳ್ಳಮಾವಾಸ್ಯೆ ತನಕ ನೆರವೇರುತ್ತಾ ಇತ್ತು. ಎಳ್ಳಮಾವಾಸ್ಯೆಯಂದು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಅಥರ್ವಶೀರ್ಷ ಸಹಸ್ರ ವೇದಕ ಯಾಗವು ಜರಗಿದ್ದು, ಮಧ್ಯಾಹ್ನ ಮಹಾಪೂಜೆ, ಉತ್ಸವ ಬಲಿ, ಪಲ್ಲಕ್ಕಿ ಸೇವೆಯ ನಂತರ ಸಾರ್ವಜನಿಕ ಅನ್ನ ಸಂತರ್ಪಣೆ ಕಾರ್ಯಕ್ರಮವು ಜರಗಿತು. ಸುಮಾರು 1000 ಕ್ಕೂ ಅಧಿಕ ಭಕ್ತಾದಿಗಳು ಅನ್ನ ಪ್ರಸಾದವನ್ನು ಸ್ವೀಕರಿಸಿದರು. ಮಧ್ಯಾಹ್ನ 3 ಗಂಟೆಯಿಂದ 7 ಭಜನಾ ತಂಡಗಳಿಂದ ಭಜನಾ ಕಾರ್ಯಕ್ರಮಗಳು ಜರಗಿತು. ರಾತ್ರಿ 7 ಗಂಟೆಗೆ ಮಹಾರಂಗಪೂಜೆ, ಉತ್ಸವ ಬಲಿ, ಪುಷ್ಪರಥೋತ್ಸವ ಕಟ್ಟೆ ಪೂಜೆ, ತೊಟ್ಟಿಲು ಸೇವೆಯ ನಂತರ ಬಂದ ಎಲ್ಲಾ ಭಕ್ತಾದಿಯುವರಿಗೆ ತಂತ್ರಿಯುವರಿಂದ ಮಂತ್ರಾಕ್ಷತೆಯುನ್ನು ನೀಡುವುದರೊಂದಿಗೆ ಎಳ್ಳಮಾವಾಸ್ಯೆ ಜಾತ್ರೆಯ ಅದ್ದೂರಿಯಿಂದ ಸಂಪನ್ನಗೊಂಡಿತು.



**ಉಡುಪಿ ಜಿಲ್ಲೆಯ ಏಪ್ರಿಲ್ 2022ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಆಂಗ್ಲ ಮಾಧ್ಯಮದಲ್ಲಿ ಸಂಸ್ಕೃತ ಪ್ರಥಮ ಭಾಷೆಯ ಮಕ್ಕಳ ಉತ್ತಮ ಸಾಧನೆಗಾಗಿ ಶ್ರೀಮತಿ ಸುನೀತಾರವರಿಗೆ ಸಾಧಕ ಪ್ರಶಸ್ತಿಯನ್ನು ನೀಡಿ ಇತ್ತೀಚೆಗೆ ಗೌರವಿಸಲಾಯಿತು.**



ಅಭಿರಾಮ ಬೈಲಕೆರೆ ಮತ್ತು ತಂಡ ನಾಗಾರ್ಜುನ ಶಾಲೆಯಿಂದ ವಿಜ್ಞಾನ ಪ್ರಾಜೆಕ್ಟ್ ಸ್ಪರ್ಧೆಯಲ್ಲಿ ಭಾಗವಹಿಸಿ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ವಿಜೇತರಾಗಿರುತ್ತಾರೆ. ಮುಂಬರುವ ದೆಹಲಿಯಲ್ಲಿ ನಡೆಯುವ ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲು ಆಯ್ಕೆ ಆಗಿರುತ್ತಾರೆ. ಇವನು ಅಜಿತ್ ಬೈಲಕೆರೆ ಮತ್ತು ಮೀನಾಕ್ಷಿ ಕಟೀಲು ಇವರ ಸುಪುತ್ರ.

### ಎಬಿಎಸ್‌ಬಿಎಸ್ ವಾರ್ಷಿಕ ಸಭೆ

## ನೂತನ ಕಾರ್ಯಕಾರಿ ಸಮಿತಿಗೆ ಅವಿರೋಧ ಆಯ್ಕೆ



ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ ಬೆಂಗಳೂರು ಇದರ ವಾರ್ಷಿಕ ಸಭೆ ಮತ್ತು ನೂತನ ಕಾರ್ಯಕಾರಿ ಸಮಿತಿಯ ಚುನಾವಣೆ ಡಿ. 18 ಭಾನುವಾರ ಜ್ಞಾನಶಕ್ತಿ ಮಂಟಪದಲ್ಲಿ ನಡೆಯಿತು. ಸಭಾದ ನೂತನ ಲೆಕ್ಕ ಪರಿಶೋಧಕರಾಗಿ ಆಯ್ಕೆಯಾದ ಬಿ.ಕೆ ಪ್ರಭಾತ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಖಜಾಂಚಿ ಸುಬ್ರಹ್ಮಣ್ಯ ರಾವ್ ಮಾರ್ಚ್‌ಗೆ ಅಂತ್ಯಗೊಂಡ 2021–22ನೇ ಹಣಕಾಸು ವರ್ಷದ ಲೆಕ್ಕಪತ್ರವನ್ನು ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಂಡರು. ಚುನಾವಣಾಧಿಕಾರಿ ಅಜ್ಜಾವರ ಶಿವರಾವ್ ಅವಿರೋಧವಾಗಿ ಆಯ್ಕೆಯಾದ ಸಭಾದ ನೂತನ ಕಾರ್ಯಕಾರಿ ಸಮಿತಿಯನ್ನು ಪ್ರಕಟಿಸಿದರು. ಅಧ್ಯಕ್ಷರಾಗಿ ರವೀಂದ್ರನಾಥ ಬೆಳ್ಳೆ, ಉಪಾಧ್ಯಕ್ಷರಾಗಿ ಭಾಗ್ಯಚಂದ್ರರಾವ್, ಕಾರ್ಯದರ್ಶಿಯಾಗಿ ಹರೀಶ್ ಮಾರ್ಪಳ್ಳಿ, ಜಂಟಿ–ಕಾರ್ಯದರ್ಶಿಯಾಗಿ ಚಂದ್ರಶೇಖರ್ ರಾವ್, ಖಜಾಂಚಿಯಾಗಿ ಜಗದೀಶ್ ರಾವ್ ಆಯ್ಕೆಯಾದರು. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಎ. ರಾಜೇಶ್ ರಾವ್, ಸಿ.ಆರ್.ಸುಬ್ರಹ್ಮಣ್ಯ ರಾವ್, ಶಶಿಕಾಂತ್ ರಾವ್, ರಮೇಶ್ ರಾವ್, ಶ್ರೀಶಾಂತ್ ರಾವ್, ಮುರಳೀಧರ ಜೋಯಿಶಿ, ಅಶ್ವಥ್ ಸಂಪಾಜೆ, ಮಾಲತಿ ಸುಬ್ರಹ್ಮಣ್ಯ ರಾವ್, ಪ್ರಕಾಶ್ ರಾವ್ ಕಡಬ, ಸಂತೋಷ್ ರಾವ್ ಕಡಬ ಆಯ್ಕೆಯಾದರು.

## ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಸರಿಯಾದ ಗೀತೆ ರಚಿಸಿ

1. ಡು|ದ|ಗಾ|ನ್ನ|ಬೊಂ|ಳ|ಹಾ|ಮ್ಮ|ಬೆ|ನ|ಬಂ|ರ|ಕೇ|
2. ಯೋ|ತ|ವಂ|ಕೊ|ದು|ಗ|ಕಂ|ಟ್ಟ|ಡಿ|ಕೈ|ತ|ಭ|
3. ನ|ದ|ಲ್ಲಿ|ಹೂ|ಡಿ|ಮಾ|ಮ|ವಿ|ಲೆ|ಮು|ನೀ|ಗೆ|
4. ದ|ನ್ನ|ಬ|ಕೆ|ಭಾ|ಸಿ|ವ|ದೆ|ನಿ|ಳ|ನು|ಮೇ|ಯ|
5. ರು|ಲೆ|ಟಿ|ಗೆ|ನ|ತು|ಂ|ಯ|ಕಿ|ಮೇ|ಟ|
6. ಡು|ಯಾ|ಡ|ಗಿ|ನೋ|ಳ|ಗಿ|ಮ್ಮಾ|ರಿ|ಹು|ಮ್ಮ|ಕೇ|ಸ|
7. ನು|ಸೇ|ದು|ಬಾ|ಲ|ಡು|ರೆ|ಗಿ|ಕೊ|ಯ|ತೆ|ವೇ|ನು|
8. ಯು|ಗೆ|ನೀ|ಡ|ನಾ|ಲಿ|ವೆ|ಗ|ಮೀ|ನ್ನ|ಯ|ಗ|ಂ|ಕ|
9. ರಾ|ಳಿ|ಅ|ನೀ|ಸೋ|ಲೆ|ರಿ|ಬೀ|ಹ|ಲೆ|ವ|ಗಾ|ಅ|
10. ಕು|ಗಾ|ಬ|ನ|ಗಿ|ಮ|ದು|ಸೇ|ನಿ|ನ|



ತಯಾರಿಸಿದವರು :
**ಹರೀಶ್ ಹೆಬ್ಬಾರ್ ಹವರಾಲು**
9663028751

**ವಾಟ್ಸ್ ಆ್ಯಪ್ ಮೂಲಕ ಉತ್ತರವನ್ನು ನೀಡಿ. ವಾಟ್ಸಾಪ್ ನಂ.9663028751 ಮೊದಲ ಹತ್ತು ಜನರ ಹೆಸರನ್ನು ಮುಂದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.**

**ಡಿಸೆಂಬರ್ ತಿಂಗಳ ಪ್ರಶ್ನೆಗೆ ವೇಗವಾಗಿ ಉತ್ತರ ನೀಡಿದವರು:**
1. ಬಂದಾಳೋ ಬಂದಾಳೋ ಬಿಂಕದ ಸಿಂಗಾರಿ 2. ಎಲ್ಲೋ ಹುಡುಕಿದೆ ಇಲ್ಲದ ದೇವರ 3. ಮನಸ್ಸಿಂದ ಯಾರೂನು ಕೆಟ್ಟೋರಲ್ಲ 4. ತಾಯೀನೇ ಇಲ್ಲದಂಥ ತವರ್ಯಾಕೆ ತಂಗಿ 5. ಆವ ಕುಲವೋ ರಂಗ ಅರಿಯಲಾಗದು 6. ನಾವಾಡುವ ನುಡಿಯೇ ಕನ್ನಡ ನುಡಿ 7. ಓ ಮೈನಾ ಓ ಮೈನಾ ಏನಿದು ಮಾಯೆ 8. ಪವಡಿಸು ಪರಮಾತ್ಮ ಶ್ರೀ ವೆಂಕಟೇಶ 9. ಈ ಭಾವಗೀತೆ ನಿನಗಾಗಿ ಹಾಡಿದೆ 10. ರಾಗ ಅನುರಾಗ ಶುಭ ಯೋಗ ಸೇರಿದೆ

**ಪ್ರಶ್ನೆಗೆ ವೇಗವಾಗಿ ಉತ್ತರ ನೀಡಿದವರು :**
1. ಸುಹಾಸಿನಿ, ಕಾರ್ಕಳ 2. ಗೀತಾ ರಾವ್, ಇಂದ್ರಾಳಿ 3. ಎಸ್.ಪದ್ಮಲತಾ, ಹಿರಿಯಡ್ಕ 4. ಮ.ಮ. ಹೆಬ್ಬಾರ್, ಬೇಳಂಜೆ 5. ಸುಧಾ ಹೆಬ್ಬಾರ್, ಸಾಲಿಗ್ರಾಮ 6. ಎಚ್. ಮಲ್ಲಿಕಾರ್ಜುನ ರಾವ್, ಕಾಪು 7. ಶೋಭಾ ರಾವ್, ಹವರಾಲು 8. ಸುಹಾಸಿನಿ ರಾವ್, ನಾರಾವಿ 9. ಜಯಲಕ್ಷ್ಮೀ ಹೆಬ್ಬಾರ್, ಸಾಲಿಗ್ರಾಮ 10. ರೇಣುಕಾ ರಾವ್, ನಾರಾವಿ

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು, ಶ್ರೀ ಪಿ. ಪ್ರಭಾಕರ ಭಂಡಿ

## ವಿಶೇಷ ಅಪ್ಪ ಸೇವೆ

ತಾ.10–01–2023ರ ಮಂಗಳವಾರ ಅಂಗಾರಕ ಸಂಕಷ್ಟಿಯಂದು ಶ್ರೀ ಶಾರದಾ ಮಂದಿರದಲ್ಲಿ ಸಾಮೂಹಿಕ ಗಣ ಹೋಮದೊಂದಿಗೆ ಶ್ರೀಮತಿ ಸುಕನ್ಯಾ ಹಾಗೂ ಶ್ರೀ ಸತೀಶ್ ರಾವ್ ದಂಪತಿಯವರು ವಿಶೇಷ ಅಪ್ಪ ಸೇವೆಯನ್ನು ನೆರವೇರಿಸಿದರು. ಪ್ರಸಾದವನ್ನು ಗಣಯಾಗದ ಭಕ್ತಾಧಿಗಳಿಗೆ ವಿತರಿಸಲಾಯಿತು.




ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕೋತ್ಸವವು ತಾ.25.12.2022ರಂದು ನಡೆಯಿತು.

## ಕವನ

### ಅರಿವು

ಬದುಕಿನ ಅರ್ಥ ಅರಸುತ್ತಾ ಎಲ್ಲೆಲ್ಲಿಯೋ ಅಲೆದೆ
ಬದುಕಿನ ಗುರಿ ಹುಡುಕುತ್ತಾ ಎಲ್ಲೆಲ್ಲಿಯೋ ತಿರುಗಿದೆ.
ಕೊನೆಗೂ ಮನವರಿಕೆಯಾದದ್ದು ಅಸಲಿಗೆ
ಬದುಕಿಗೆ ಅರ್ಥ, ಗುರಿಗಳೇ ಇಲ್ಲ
ಕೊನೆ ತನಕವೂ ಇದು ಗೊತ್ತಾಗುವುದಿಲ್ಲ
ಎಂಬ ಪರಮ ಸತ್ಯದ ಅರಿವು.

### ವ್ಯವಸ್ಥೆ

ಸಿಟ್ಟಿಲ್ಲ...
ವಿವಿಧ ಕೌಟುಂಬಿಕ ಸಂದರ್ಭಗಳಲ್ಲಿ
ಅವಮಾನಗೈದ ಕುಟುಂಬಿಕರ ಮೇಲೆ
ಆಕ್ರೋಶವಿಲ್ಲ...
ವಿವಿಧ ಸಾಮಾಜಿಕ ಸನ್ನಿವೇಶಗಳಲ್ಲಿ
ಅವಹೇಳನಗೈದ ಸಾಮಾಜಿಕರ ಮೇಲೆ
ನನಗೆ ನಿಜವಾಗಿಯೂ ಸಿಟ್ಟು, ಆಕ್ರೋಶಗಳಿರುವುದು
ವ್ಯಕ್ತಿಗಳ ಮೇಲಲ್ಲ, ವ್ಯವಸ್ಥೆಯ ಮೇಲೆ
ನಮ್ಮನ್ನು ಆಚರಿಸಿರುವ ಸಮಗ್ರ ಸಾಮಾಜಿಕ
ಆರ್ಥಿಕ, ರಾಜಕೀಯ ವ್ಯವಸ್ಥೆಗಳ ಮೇಲೆ
ಅವಿನಾಭಾವವಾದುದು...
ವ್ಯಕ್ತಿ, ವ್ಯವಸ್ಥೆಗಳ ಸಂಬಂಧ
ಈ ವ್ಯವಸ್ಥೆಯೇ ವ್ಯಕ್ತಿಗಳನ್ನು
ಹತಾಶೆಗೆ ನೂಕುತ್ತದೆ, ಕ್ರೌರ್ಯಕ್ಕೆ ತಳ್ಳುತ್ತದೆ.
ಅಂತಿಮವಾಗಿ ಎಲ್ಲಾ ವ್ಯಕ್ತಿಗಳು
ಈ ವ್ಯವಸ್ಥೆಯ ಬಲಿಪಶುಗಳು...

–ಹೆಚ್.ಮಲ್ಲಿಕಾರ್ಜುನ ರಾವ್, ಕಾಪು

## ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾ ಮಂಗಳೂರು

ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾ ಮಂಗಳೂರು ಇವರ ವತಿಯಿಂದ
**ದಿನಾಂಕ 15–02–2023 ಬುಧವಾರದಂದು**
**ಬೈಂದೂರು ತಾಲೂಕು ಉಪ್ಪುಂದದ ಅಮರಕೋಡಿ ಶ್ರೀ ಈಶ್ವರ ದೇವಸ್ಥಾನದಲ್ಲಿ**

**ಶ್ರೀ ರುದ್ರೈಕಾದಶಿನೀ ಹೋಮವು**

ಜರುಗಲಿದೆ.
ನಮ್ಮ ಸಮಾಜದವರ ಅಧ್ವರ್ಯದಲ್ಲಿ ಸಂಪನ್ನಗೊಳ್ಳಲಿರುವ ಈ ಕಾರ್ಯ ಕ್ರಮಕ್ಕೆ ನಮ್ಮ ಸಮಾಜದವರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀ ರುದ್ರನ ಅನುಗ್ರಹಕ್ಕೆ ಪಾತ್ರರಾಬೇಕಾಗಿ ಅಪೇಕ್ಷೆ.

**– ಗೌರವಾಧ್ಯಕ್ಷರು, ಮಾರ್ಗದರ್ಶಕರು, ಕಾರ್ಯದರ್ಶಿ, ಅಧ್ಯಕ್ಷರು, ಸರ್ವಸದಸ್ಯರು.**

## ಸಮಾಜಬಾಂಧವರಲ್ಲಿ ಆರ್ಥಿಕ ನೆರವಿಗಾಗಿ ಮನವಿ

ವಾಳ ಗ್ರಾಮದ ಹಳೆಪ್ಪಳ್ಳಿ ನಿವಾಸಿ ಗ್ರಾಮದ ದೇವಸ್ಥಾನದಲ್ಲಿ ಕೆಲಸ ಮಾಡುವ "ರಮೇಶ್ ರಾವ್" ಇವರ ಹೆಂಡತಿ "ಭಾಗ್ಯಲಕ್ಷ್ಮಿ" ಇವರು "ಬ್ರೈನ್ ಟ್ಯೂಮರ್" ಕಾಯಿಲೆಯಿಂದ ಬಳಲುತ್ತಿದ್ದು ಮಂಗಳೂರು KMC ಆಸ್ಪತ್ರೆಗೆ ದಾಖಲಾಗಿದ್ದಾರೆ ಮತ್ತು ಇದಕ್ಕೆ ತುರ್ತು ಆಪರೇಷನ್ ಆಗಿದ್ದು ಈಗಾಗಲೇ ಸುಮಾರು 5 ಲಕ್ಷದವರೆಗೆ ಖರ್ಚಾಗಿದ್ದು ಅಷ್ಟೊಂದು ಹಣ ಭರಿಸಲು ರಮೇಶ್ ರಾವ್ ಇವರಿಗೆ ಅಸಾಧ್ಯವಾಗಿದ್ದು ಸಹೃದಯಿ ಗ್ರಾಮಸ್ಥರು ದಾನಿಗಳು ತಮಗೆ ಆದಷ್ಟೂ ಸಹಾಯ ಮಾಡಿ ಇವರ ಬಡ ಕುಟುಂಬಕ್ಕೆ ಆದಾರವಾಗಬೇಕಾಗಿ ವಿನಂತಿ....

ಬ್ಯಾಂಕ್ ಖಾತೆ ವಿವರ :**ಹೆಸರು : ರಮೇಶ್ ರಾವ್**
**A/c No. : 520101055819075**
**IFSC : UBIN0903515**
**ಯೂನಿಯನ್ ಬ್ಯಾಂಕ್ ವಾಳ Contact ñ 9900787040, 9880205081**

ಈ ಕುಟುಂಬಕ್ಕೆ ಹಣದ ಅವಶ್ಯಕತೆ ಇದ್ದು ಸಹೃದಯಿಗಳು ಸಹಾಯ ಮಾಡಬೇಕಾಗಿ ಪ್ರಾರ್ಥನೆ.



ಕೆ. ದಿನಮಣಿ ಶಾಸ್ತ್ರೀ ಮೊಬೈಲ್ : 8277190632 9482284970

**ಚಿತ್ತಾರ ಫೋಟೋ ಆರ್ಟ್**
ಶುಭ ಸಮಾರಂಭಗಳ ಛಾಯಾಚಿತ್ರ ಮತ್ತು ವೀಡಿಯೋಗಾಗಿ ಕರೆಮಾಡಿ
ಚಿತ್ತಾರ, 3/96, ನವೋದಯನಗರ, ಚಾಂತಾರು, ಅಗ್ರಹಾರ, ಬ್ರಹ್ಮಾವರ–576213.

PRODUCTS ARE AVAILABLE AT ATTRACTIVE DISCOUNT PRICES


**BATTERY PLANET**
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

**Buying and selling shares as easy as checking your emails**
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com



**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com


ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655

## ಕೋಲ್ವೆ ದಿ| ವಿಠಲ ರಾವ್ ಅವರಿಗೆ ವಿದಾಯ

–ಜಿ.ಕೆ. ಕೋಲ್ವೆ, ಉಡುಪಿ

ಆಯುರ್ವೇದ ಪಂಡಿತ ಕೋಲ್ವೆ ಕೊಡಂಗೆ ವೆಂಕಟ್ರಮಣಯ್ಯ ಮತ್ತು ಪೊಳಲಿ ಮೂಲದ, ಪುತ್ತೂರು ತಾಲೂಕಿನ ಭಾಗೀರಥಿಯಮ್ಮ ಇವರ ಪುತ್ರರಾದ ಕೋಲ್ವೆ ದಿ| ವಿಠಲ ರಾವ್ ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕೋಲ್ವೆ ಸಮೀಪದ ಶಾಲೆಯಲ್ಲಿ ಮುಗಿಸಿದರು. ತಂದೆಯವರ ಕಾಲಾನಂತರ ಕಾರ್ಕಳ ಜೋಗುಳಬೆಟ್ಟಿಗೆ ತಾಯಿ, ಅಣ್ಣ, ತಮ್ಮ, ತಂಗಿಯರೊಂದಿಗೆ ಬಂದು ನೆಲೆಸಿದರು. ಧೈರ್ಯವಂತ, ನಿಷ್ಠುರವಾದಿ, ಮಾತಲ್ಲಿ ಮೋಡಿಮಾಡಬಲ್ಲ, ಸಾರ್ವಜನಿಕ ಸಹಕಾರಿಯಾದ ಇವರು ಕೃಷಿ, ರೇಶ್ಮೆ, ರಬ್ಬರ್ ಬೆಳೆ, ತೆಂಗು, ಕಂಗು, ಬಾಳೆ ಇತ್ಯಾದಿಯಲ್ಲಿ ಆಸಕ್ತಿಯನ್ನು ಹೊಂದಿದ್ದರು. ಕೃಷಿ ಕೈ ಹಿಡಿಯದ ಕಾರಣ, ಸರಕುಸಾಗಣೆಗೆ ಮಿನಿ ಟೆಂಪೋ, ಆ ಮೇಲೆ ಆಟೋರಿಕ್ಷಾ ಚಾಲನೆಗೆ ಆಸಕ್ತಿ ತೋರಿಸಿದ ಕಾರ್ಕಳ ಪೇಟೆಯ ತೆಳ್ಳಾರು ರಸ್ತೆಯ (ರಾಘವೇಂದ್ರ ಮಠದ ಪಕ್ಕ) ಸಮೀಪ ಮನೆ ಮಾಡಿ, ಗೂಡಂಗಡಿ ವ್ಯಾಪಾರ ಶುರು ಮಾಡಿದರು. ಇದ್ಯಾವುದೂ ಮನಸ್ಸಿಗೆ ಹಿತವಾಗದೆ, ಒಬ್ಬ ಸಾಧು/ಸಂತನಿಂದ ತಂತ್ರ–ಮಂತ್ರ ಕಲಿತು ಸಾಧನೆ ಮಾಡಿ, ಬಯಸಿ ಬಂದವರಿಗೆ ಪರಿಹಾರ ಹೇಳುತ್ತಾ ಅವರು ಕೊಟ್ಟಷ್ಟು ಸಂಭಾವನೆ ಸ್ವೀಕರಿಸಿ, ಹೆಸರುವಾಸಿಯಾದರು. ಇವರ ಧರ್ಮಪತ್ನಿಯಾದ ಆಶಾ ಇವರು ಕಬ್ಬಿನಾಲೆ ಕೃಷ್ಣಯ್ಯ ಹೆಬ್ಬಾರರ ಪುತ್ರಿ. ಇವರಿಗೆ ಎರಡು ಹೆಣ್ಣು ಮಕ್ಕಳು. ಮದುವೆಯಾಗಿ ಯೋಗ್ಯ ಮನೆತನಕ್ಕೆ ಸೇರಿಸಿದ್ದಾರೆ. "ಆಡುಮುಟ್ಟದ ಸೊಪ್ಪಿಲ್ಲ ಸೋಗೆ ಇಲ್ಲ" ಎಂಬಂತೆ ಎಲ್ಲಾ ಕ್ಷೇತ್ರದಲ್ಲಿ ಕೈಯಾಡಿಸಿ ಅಸೌಖ್ಯದಿಂದ ತಾ.17.12.2022ರಂದು ಭಗವತ್ಪಾದ ಸೇರಿ ನಮ್ಮನ್ನೆಲ್ಲಾ ಅಗಲಿ ನಡೆದೇಬಿಟ್ಟರು. ಅಂತಿಮ ಕ್ರಿಯಾದಿನದಂದು, ಅವನ ಬಗ್ಗೆ ಊರ ಮಹನೀಯರು "ಇಂತಹ ನಿಷ್ಠುರವಾದಿ, ಧೈರ್ಯಶಾಲಿ, ಶ್ರಮಜೀವಿ, ಸಹಕಾರ ಮನೋಭಾವದ ಗುಣ ಹೊಂದಿರುವ ದಿ| ವಿಠಲರಾಯರು ಸದಾ ನೆನಪಿನಲ್ಲಿರುತ್ತಾರೆ" ಎಂದು ಅವನ ಗುಣಗಾನ ಮಾಡಿದ್ದು ವಿಶೇಷವಾಗಿತ್ತು. ಅಗಲಿದ ವಿಠಲನಿಗೆ ನಮ್ಮೆಲ್ಲರ ಚಿರಮಾಂಜಲಿ.

## ಹೊಸ್ಕೋಟೆ ಗೋಪಾಲರಾಯರಿಗೆ 90 ವರ್ಷ ಪೂರೈಸಿದ ಸಂಭ್ರಮ

ಹೊಸ್ಕೋಟೆ ಗೋಪಾಲರಾಯರಿಗೆ 90 ವರ್ಷ ಪೂರೈಸಿದ ಈ ಶುಭ ಸಂದರ್ಭದಲ್ಲಿ ತಾ.25.12.2022ರಂದು ಅವರ ಸ್ವಗೃಹ "ಶುಭ ಸಂಕಲ್ಪ"ದಲ್ಲಿ ಗಣಹೋಮ, ಸತ್ಯ ನಾರಾಯಣ ಪೂಜೆ, ಪವಮಾನ ಶಾಂತಿಯೊಂದಿಗೆ ಧಾರ್ಮಿಕ ಕಾರ್ಯಕ್ರಮ ಗಳು ನೆರವೇರಿದವು. ಹೊಸ್ಕೋಟೆ ಆನಂದ ರಾಯರು ಕುಟುಂಬದ ಕುರಿತು "ವಂಶವಾಹಿನಿ" ಮತ್ತು "ನಮ್ಮ ಹಬ್ಬ ನಮ್ಮ ಹೆಮ್ಮೆ"ಯ ಹೊತ್ತಿಗೆ ರಚಿಸಿದ್ದು ಅದರ ಬಿಡುಗಡೆಯ ಸಮಾರಂಭವು ಬೆಳಿಗ್ಗೆ 11.30ಕ್ಕೆ ಸಭಾ ಕಾರ್ಯಕ್ರಮವು ಪ್ರಾರಂಭಗೊಂಡಿತು. ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಎಂ. ಸತ್ಯನಾರಾಯಣ ಹೆಬ್ಬಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ಎಚ್. ಸುಬ್ರಹ್ಮಣ್ಯ ರಾವ್ ಸ್ವಾಗತಿಸಿದರು. ಹೆಚ್. ಆನಂದರಾವ್ ಪ್ರಾಸ್ತಾವಿಕ ಮಾತನಾಡಿದರು.

ಶ್ರೀ ಪಿ. ಶೇಷಪ್ಪಯ್ಯನವರು ಜ್ಯೋತಿ ಬೆಳಗಿಸಿ ಶುಭ ಹಾರೈಸಿದರು. ಕುಟುಂಬದ ಹಿರಿಯರಾದ ಶ್ರೀ ಎಚ್. ಗೋಪಾಲ ರಾಯರು "ವಂಶವಾಹಿನಿ" ಹೊತ್ತಿಗೆ ಬಿಡುಗಡೆಗೊಳಿಸಿ "ನಮ್ಮ ಹಬ್ಬ ನಮ್ಮ ಹೆಮ್ಮೆ"ಯ ಹೊತ್ತಿಗೆಯನ್ನು ಹೆಚ್. ಕೃಷ್ಣಯ್ಯ ವಿ.ರಾವ್ ಬಿಡುಗಡೆಗೊಳಿಸಿದರು. ಶ್ರೀ ಜೆ.ಎಚ್. ಕೃಷ್ಣಗೋಪಾಲ, ಗೋಪಾಲಕೃಷ್ಣ ಹೆಬ್ಬಾರ ಅಬ್ಲಿಕಟ್ಟೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀಕೃಷ್ಣಗೋಪಾಲ ಹೆಬ್ಬಾರ ರವರು ಸಂಧರ್ಭೋಚಿತವಾಗಿ ಮಾತನಾಡಿ ದರು. ಜೆ.ಎಚ್. ಶ್ರೀ ಕಂದಯ್ಯ, ಶ್ರೀಮತಿ ಉಮ ಅಕ್ಷಯ ಕುಮಾರ, ಶ್ರೀ ಮಂಜುನಾಥ ಹೆಬ್ಬಾರ, ಭಾಸ್ಕರರಾವ್, ಗಂಗಾಧರ ಶ್ಯಾನುಭೋಗ, ಡಾ. ಶಂಕರರಾವ್, ವೆಂಕಪ್ಪಯ್ಯ ಹೆಬ್ಬಾರ ಇವರೆಲ್ಲರೂ ಶುಭಾಶಂಸನೆಗೈದರು. "ಹಿರಿಯರಾದ ಶ್ರೀ ಗೋಪಾಲರಾಯರು 90 ವರ್ಷ ಪೂರೈಸಿದ ಈ ಸಂದರ್ಭದಲ್ಲಿ ನನ್ನ ಅಧ್ಯಕ್ಷತೆಯ ನೆಲೆಯಲ್ಲಿ ಕಾರ್ಯಕ್ರಮ ನಡೆಸಿರುವುದು ತುಂಬಾ ಸಂತೋಷಕರ ವಿಷಯವಾಗಿದೆ ಹಾಗೂ "ವಂಶವಾಹಿನಿ" ಹೊತ್ತಿಗೆ ಬಿಡುಗಡೆಗೊಳಿಸಿರುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸೂಕ್ತ ಕಾರ್ಯಕ್ರಮವಾಗಿದೆ" ಎಂದು ಮನದಾಳ ದಿಂದ ಮಾತನಾಡಿ ಶುಭ ಹಾರೈಸಿದರು.

ಗೋಪಾಲರಾಯರು ಮತ್ತು ಧರ್ಮಪತ್ನಿ ಶ್ರೀಮತಿ ಜಾನಕಿಯವರು ಮಾಲಾರ್ಪಣೆಯನ್ನು ಪರಸ್ಪರ ವಿನಿಮಯ ಗೊಳಿಸಿದರು. ಕುಟುಂಬದ ಎಲ್ಲಾ ಸದಸ್ಯರು ಆಶೀರ್ವಾದ ಪಡೆದರು.

ಗಣೇಶ ಮೂರ್ತಿ ಹೆಬ್ಬಾರ ಗುಂಡ್ಮಿ ಕಾರ್ಯಕ್ರಮ ನಿರ್ವಹಿಸಿದರು. ಹೆಚ್. ಜಗದೀಶ ರಾವ್ ಸಹಕರಿಸಿದರು. ಶ್ರೀ ಎಚ್. ಲಕ್ಷ್ಮೀನಾರಾಯಣ ರಾವ್ ವಂದನಾರ್ಪಣೆ ಗೈದರು.

## ಶುಭ ಜನನ

ಶ್ರೀ ಮನೋಹರ ಜೋಷಿ ಮತ್ತು ಶ್ರೀಮತಿ ಮಾನಸ ಜೋಷಿ (ಶ್ರೀ ದೇವರಾಜ ಜೋಷಿ ಬಪ್ಪಳಿಗೆ ಮತ್ತು ಶ್ರೀಮತಿ ಮಾಲತಿ ಜೋಷಿ ಇವರ ಪುತ್ರ ಹಾಗೂ ಶ್ರೀ ಸುಬ್ರಹ್ಮಣ್ಯ ಹೆಬ್ಬಾರ್, ಕೊಲ್ಲೂರು ಮತ್ತು ಶ್ರೀಮತಿ ಉಮಾದೇವಿ ಹೆಬ್ಬಾರ್ ಇವರ ಪುತ್ರಿ) ಇವರಿಗೆ ತಾ.24.11.2022 ರಂದು ಹೆಣ್ಣು ಮಗುವಿನ ಜನನ.

**** ****

ಶ್ರೀ ರಮೇಶ್ ರಾವ್ ಮತ್ತು ಶ್ರೀಮತಿ ಶಾಂಭವಿ ಇವರ ಮಗ ಪವನ್ ಹಾಗೂ ಸೊಸೆ ಶ್ವೇತಾ ಇವರಿಗೆ ತಾ.30.11.2022 ರಂದು ಹೆಣ್ಣು ಮಗುವಿನ ಶುಭ ಜನನ.

## ನಿಧನ



ತಲಪಾಡಿ ಸೀತಾರಾಮಯ್ಯ ಅವರ ಧರ್ಮಪತ್ನಿ ಶ್ರೀಮತಿ ರತ್ನಾವತಿ ಇವರು ತಾ.08.12.2022 ರಂದು ಸ್ವಗೃಹದಲ್ಲಿ ನಿಧನರಾದರು. ಇವರು ಪತಿ, ಮೂವರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿರುತ್ತಾರೆ.

**** ****



ಬೆಂಗಳೂರಿನ ಸುಬ್ರಹ್ಮಣ್ಯ ಸಭಾದಲ್ಲಿ ಸಕ್ರಿಯರಾಗಿದ್ದ ಶ್ರೀ ಕೆಡೆಂಜೆ ಸುಬ್ರಹ್ಮಣ್ಯ ಶಾಸ್ತ್ರಿಯವರು ತಮ್ಮ 75ನೇ ವಯಸ್ಸಿನಲ್ಲಿ ತಾ.20.12.2022 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿರುತ್ತಾರೆ.



**** ****

ಕೋಲ್ವೆ ವಿಠ್ಠಲ್ ರಾವ್ ಇವರು ತಮ್ಮ 70ನೇ ವಯಸ್ಸಿನಲ್ಲಿ ತಾ.17.12.2022 ರಂದು ಕಾರ್ಕಳದಲ್ಲಿ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿರುತ್ತಾರೆ.

**** ****



ಸುರತ್ಕಲ್‌ನಲ್ಲಿರುವ ಶ್ರೀ ಬಿ. ಸತೀಶ್ ಚಂದ್ರರಾವ್ ಅವರ ಪತ್ನಿ ಶ್ರೀಮತಿ ಪ್ರಶಾಂತಿ ಇವರು ತಮ್ಮ 54ನೇ ವಯಸ್ಸಿನಲ್ಲಿ ತಾ. 18.12.2022 ರಂದು ನಿಧನರಾದರು. ಇವರು ಪತಿ, ಇಬ್ಬರು ಪುತ್ರರನ್ನು ಅಗಲಿರುತ್ತಾರೆ.

**** ****



ಅಜ್ಜಾವರದ ಪಟೇಲ್ ಹೌಸ್ ಅಜ್ಜಾವರದಲ್ಲಿ ದಿವಂಗತ ಶ್ರೀ ಅಜ್ಜಾವರ ಕಮಲನಾಭ ಅವರ ಪತ್ನಿ ಶ್ರೀಮತಿ ಕಮಲಮ್ಮ ಇವರು ತಮ್ಮ 90 ನೇ ವಯಸ್ಸಿನಲ್ಲಿ ತಾ. 15–12–2022 ರಂದು ನಿಧನರಾದರು.

**** ****



ಕಾರ್ಕಳ ಕಬ್ಬಿನಾಲೆ ಮೇಲ್ಮನೆ ದಿವಂಗತ ಗೋಪಾಲಕೃಷ್ಣ ಹೆಬ್ಬಾರ್ ರವರ ಪತ್ನಿ ಸರಸ್ವತಿ ಹೆಬ್ಬಾರ್ ತಮ್ಮ 78ನೇ ವಯಸ್ಸಿನಲ್ಲಿ ತಾ. 31–12–2022 ರಂದು ನಿಧನರಾದರು.

**** ****



ಬರದಕಲ್ ಶ್ರೀ ಮೋಹನರಾವ್ ಅವರು ತಮ್ಮ 72ನೇ ವಯಸ್ಸಿನಲ್ಲಿ ತಾ. 01.01.2023 ರಂದು ನಿಧನರಾದರು. ಇವರು ಪತ್ನಿ, ಮೂವರು ಪುತ್ರಿಯರನ್ನು ಅಗಲಿರುತ್ತಾರೆ.

**** ****



ದಿವಂಗತ ಶ್ರೀ ಇನ್ನ ಹರಿಶ್ಚಂದ್ರ ರಾವ್ ಅವರ ಪತ್ನಿ ಶ್ರೀಮತಿ ಪದ್ಮಾ ಹರಿಶ್ಚಂದ್ರ ರಾವ್ ಅವರು ತಮ್ಮ 80ನೇ ವಯಸ್ಸಿನಲ್ಲಿ ತಾ. 01.01.2023 ರಂದು ಮುಂಬೈನಲ್ಲಿ ನಿಧನರಾದರು. ಇವರು ಓರ್ವ ಪುತ್ರನನ್ನು ಅಗಲಿರುತ್ತಾರೆ.

**** ****



ಬೊಕ್ಕಸ ಮನೆತನದ ಹಿರಿಯರಾದ ಮೋಹನರಾವ್ ಐರಾವತ ಅವರು ತಮ್ಮ 85ನೇ ವಯಸ್ಸಿನಲ್ಲಿ ತಾ. 03.01.2023ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರು ಪತ್ನಿ, ನಾಲ್ವರು ಪುತ್ರರನ್ನು ಅಗಲಿರುತ್ತಾರೆ.

**** ****



ಪಾವಂಜೆಯ ದೇವಸ್ಥಾನದಲ್ಲಿ ಕೆಲಸದಲ್ಲಿದ್ದ ಹೆರಿಂಜಾಲು ವೆಂಕಟೇಶ ಕನಕ ಇವರು ತಮ್ಮ 67 ವರ್ಷ ಪ್ರಾಯದಲ್ಲಿ ತಾ.04.01.2023ನೇ ಬುಧವಾರದಂದು ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರನ್ನು ಅಗಲಿರುತ್ತಾರೆ.

**** ****



ಶ್ರೀ ಆಳುಗ್ಗೆಲು ವೆಂಕಟ ರಾವ್ ಅವರು ತಮ್ಮ 86 ನೇ ವಯಸ್ಸಿನಲ್ಲಿ ತಾ.06–01–2023 ರಂದು ಉಡುಪಿಯ ಹಿರಿಯಡ್ಕದಲ್ಲಿರುವ ಅವರ ನಿವಾಸದಲ್ಲಿ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

**** ****



ಶ್ರೀ ಯು. ಕುಮಾರಸ್ವಾಮಿ ಪಿ. ನೆಟ್ಟ ಕಲ್ಲಡ್ಕ ಇವರು ಅಲ್ಪಕಾಲದ ಅನಾರೋಗ್ಯದ ಬಳಿಕ ತಾ.05.01.2023ರಂದು ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿರುತ್ತಾರೆ.

**** ****

ಶ್ರೀ ನಟ್ಟೋಜಿ ಶಾರ (ಮೇಲ್ಮನೆ) ಜಗನ್ನಿವಾಸ್ ರಾವ್ (ದಿವಂಗತ ಶ್ರೀ ಎನ್.ಎಸ್.ನಾರಾಯಣರಾವ್ ಅವರ ಪುತ್ರ) ಅವರು ತಮ್ಮ 82ನೇ ವಯಸ್ಸಿನಲ್ಲಿ ತಾ.24.12.2022ರಂದು ಮೈಸೂರಿನಲ್ಲಿ ನಿಧನರಾದರು.

**** ****

ಶ್ರೀ ನಂದಾವರ ಪ್ರಭಾಕರ ರಾವ್ (ನಿವೃತ್ತ ವಿಜಯಾ ಬ್ಯಾಂಕ್) ಅವರು ತಮ್ಮ 73ನೇ ವಯಸ್ಸಿನಲ್ಲಿ ತಾ.02.01.2023ರಂದು ಬೆಂಗಳೂರಿನಲ್ಲಿ ಹೃದಯಾಘಾತದಿಂದ ನಿಧನರಾದರು.

## ಶುಭ ವಿವಾಹ

ಶ್ರೀಮತಿ ಮಧುಮಾಲತಿ ರಾವ್ ಮತ್ತು ಇನ್ನಂಜೆ ಶ್ರೀ ಶ್ರೀಪತಿ ರಾವ್ ಅವರ ಪುತ್ರ **ಚಿ. ಶಮಂತ್ ರಾವ್** ಹಾಗೂ ಹೆಬ್ರಿಯ ಶ್ರೀ ಶ್ರೀಪತಿ ಹೆಬ್ಬಾರ್ ಮತ್ತು ಶ್ರೀಮತಿ ಸುಲೋಚನಾ ಹೆಬ್ಬಾರ್ ಅವರ ಪುತ್ರಿ **ಚಿ.ಸೌ. ಪೂಜಾ** ಇವರ ವಿವಾಹವು ದಿನಾಂಕ 08.12.2022 ರಂದು ಹೆಬ್ರಿ ಶ್ರೀ ಅನಂತ ಪದ್ಮನಾಭ ಸ್ವಾಮಿ ದೇವಸ್ಥಾನದಲ್ಲಿ ಜರಗಿತು.

**** ****

ಶ್ರೀಮತಿ ಚಂದ್ರಶ್ರೀ ಮತ್ತು ಶ್ರೀ ನಟ್ಟೋಜಿ ಎಸ್. ನಟರಾಜ್ ಅವರ ಪುತ್ರ **ಚಿ. ಶರತ್** ಹಾಗೂ ಶ್ರೀ ಉಚ್ಚಿಲ ಹರೀಶ್ ಕುಮಾರ್ ಮತ್ತು ಶ್ರೀಮತಿ ಸ್ವರ್ಣ ಅವರ ಪುತ್ರಿ **ಚಿ. ಸೌ. ಚಂದನಾ** ಇವರ ವಿವಾಹವು ದಿನಾಂಕ 09.12.2022 ರಂದು ಬೆಂಗಳೂರಿನ ಶ್ರೀ ಶಿವಬಾಲಯೋಗಿ ಕಲ್ಯಾಣ ಮಂಟಪದಲ್ಲಿ ಜರಗಿತು.

**** ****

ಶ್ರೀಮತಿ ಜಯಂತಿ ಎಸ್. ರಾವ್ ಮತ್ತು ಪರ್ಕಳದ ಡಾ. ಶ್ರೀ ಬಿ.ಎಸ್. ಸತೀಶ್ ರಾವ್ ಅವರ ಪುತ್ರ **ಚಿ. ಶ್ರುತೀಶ್** ಹಾಗೂ ಮುಳಬಾಗಿಲು ಶ್ರೀ ವಿನೋದ್ ಗುರುರಾಜ್ ಮತ್ತು ಶ್ರೀಮತಿ ಶಕುಂತಲಾ ಅವರ ಪುತ್ರಿ **ಚಿ.ಸೌ ರಮ್ಯಾ** ಇವರ ವಿವಾಹವು ದಿನಾಂಕ 11.12.2022 ರಂದು ಬೆಂಗಳೂರಿನ ಗಿರಿನಗರದ ಅವಧಾನಿ ಕನ್ವೆನ್ಷನ್ ಸೆಂಟರ್‌ನಲ್ಲಿ ಜರಗಿತು.

**** ****

ಶ್ರೀಮತಿ ಗೌರಿ ಮತ್ತು ಶ್ರೀ ಚಂದ್ರಶೇಖರ ರಾವ್ ಕುಂಜಾರುಗಿರಿ ಇವರ ಪುತ್ರ **ಚಿ. ಭರತ್** ಹಾಗೂ ಶ್ರೀಮತಿ ಸುಕನ್ಯಾ ಮತ್ತು ಶ್ರೀ ಶಶಿಧರ ರಾವ್ ಚಿತ್ರಾಪುರ ಇವರ ಪುತ್ರಿ **ಚಿ.ಸೌ ಸುಷ್ಮಾ** ಇವರ ವಿವಾಹವು ತಾ.26.12.2022ರಂದು ಎರ್ಮಾಳು ಶ್ರೀ ಜನಾರ್ಧನ ದೇವಸ್ಥಾನದ ಜನಕಲ್ಯಾಣ ಸಭಾಂಗಣದಲ್ಲಿ ಜರಗಿತು.

**** ****

ಶ್ರೀಮತಿ ಶಶಿಕಲಾ ನಾಸಿಕ್ ಮತ್ತು ಕೀರ್ತಿಶೇಷ ಸೋಮಶೇಖರ ರಾವ್ ಇವರ ಪುತ್ರ **ಚಿ. ಶೋಧನ ರಾವ್** ಹಾಗೂ ಶ್ರೀಮತಿ ಯಶೋಧ ಮತ್ತು ಶ್ರೀ ಪಿ. ಮೋಹನ ರಾವ್ ಕೊಡವೂರು ಇವರ ಪುತ್ರಿ **ಚಿ. ಸೌ. ಶಾಲಿನಿ ರಾವ್** ಪಿ. ಇವರ ವಿವಾಹವು ತಾ.26.12.2022 ರಂದು ಕೊಡವೂರು "ವಿಪ್ರಶ್ರೀ ಕಲಾಭವನ"ದಲ್ಲಿ ಜರಗಿತು.

**** ****

ಶ್ರೀಮತಿ ಗಾಯತ್ರಿ ಮತ್ತು ಶ್ರೀ ವೈ. ಪ್ರಕಾಶ ಕುಮಾರ ಎಲ್ಲೂರು ಇವರ ಪುತ್ರ **ಚಿ.ನವನೀತ್ ರಾವ್ ವೈ** ಹಾಗೂ ಶ್ರೀಮತಿ ಕಲಾವತಿ ಮತ್ತು ಶ್ರೀ ಅಶೋಕ ರಾವ್ ಕುರಾಯ ಇವರ ಪುತ್ರಿ **ಚಿ.ಸೌ.ಆಶ್ರಿತಾ ಕೆ.** ಇವರ ವಿವಾಹವು ಉಜಿರೆ ಶ್ರೀ ಜನಾರ್ಧನ ಸ್ವಾಮಿ ದೇವಸ್ಥಾನದ "ಶ್ರೀ ಕೃಷ್ಣಾನುಗ್ರಹ ಸಭಾ ಭವನದಲ್ಲಿ ತಾ.26.12.2022ರಂದು ಜರಗಿತು.

**** ****

ಶ್ರೀ ಕೆ.ಕಿರಣ್ ಕುಮಾರ್ ಮತ್ತು ಶ್ರೀಮತಿ ನಮಿತಾ ದಂಪತಿಯ ಪುತ್ರ **ಚಿ. ಸುಭಾಗ್** ಹಾಗೂ ಶ್ರೀ ಐ.ಪಿ. ಚಂದ್ರಕಾಂತ್ ರಾವ್ ಮತ್ತು ಶ್ರೀಮತಿ ಹರಿಣಿ ಅವರ ಪುತ್ರಿ **ಚಿ.ಸೌ. ಸಹನಾ** ಇವರ ವಿವಾಹವು ತಾ.29.12.2022 ರಂದು ರಜತಾದ್ರಿ ಸಭಾಭವನ, ವಾಮಂಜೂರು, ಮಂಗಳೂರು ಇಲ್ಲಿ ಜರಗಿತು.

**** ****

ಶ್ರೀಮತಿ ವಸಂತಿ ಮತ್ತು ಶ್ರೀ ಎಂ. ಸದಾಶಿವ ರಾವ್‌ರವರ ಪೌತ್ರಿ ಶ್ರೀಮತಿ ಶೀತಲ್ ಮತ್ತು ಡಾ.ಅಶುತೋಷ್ ರಾವ್ ದಂಪತಿಯ ಪುತ್ರಿ **ಡಾ.ಚಿ.ಸೌ.ತನ್ವಿ ರಾವ್** ಹಾಗೂ ಶ್ರೀಮತಿ ಸುನೀತಾ ಸಿನ್ನ ಮತ್ತು ಶ್ರೀ ಗೋಪಾಲ ನಾರಾಯಣ ಸಿಂಘರ ಪುತ್ರ **ಡಾ.ಚಿ. ಕುಮಾರ್ ಸಿದ್ಧಾರ್ಥ್** ಇವರ ವಿವಾಹವು ತಾ.04.01.2023ರಂದು ಉಡುಪಿಯ ಅಮೃತ್ ಗಾರ್ಡನ್ ಸಭಾಭವನದಲ್ಲಿ ಜರಗಿತು.

## ವೈವಾಹಿಕ ಸುವರ್ಣ ಸಂಭ್ರಮ

ಶ್ರೀಮತಿ ಸುನಂದಾ ಮತ್ತು ಶ್ರೀ ಸಿ.ಎಸ್. ರಾವ್ ದಂಪತಿಗಳ ವೈವಾಹಿಕ ಜೀವನದ ಸುವರ್ಣ ಮಹೋತ್ಸವವನ್ನು ತಾ.30.12.2022ರಂದು ಶ್ರೀ ಶಾರದಾ ಮಂಟಪದಲ್ಲಿ ಅವರ ಮಕ್ಕಳು ಮತ್ತು ಕುಟುಂಬಿಕರು ಸಂಭ್ರಮದಿಂದ ಆಚರಿಸಿದರು.

## ವಿಳಾಸ ಬದಲಾವಣೆ

ಬಿ.ಹರಿಶ್ಚಂದ್ರರಾವ್
5/3/60, B1A, "ಧೀಮಹಿ",
ದುರ್ಗಾಪ್ರಸಾದ್ ಕಾಂಪೌಂಡ್,
ಚಿಟ್ಪಾಡಿ, ಉಡುಪಿ – 576101

## ಗೃಹ ಪ್ರವೇಶ

ತಾ.30.11.2022 ರಂದು ಶ್ರೀಮತಿ ಅಶ್ವಿನಿ ಮತ್ತು ಮಧುಕರ ರಾವ್ ಕಳಸ ಇವರು ತಮ್ಮ ನೂತನ ಗೃಹ "ಈಶ್ವರಿ"ಯ ಗೃಹಪ್ರವೇಶವನ್ನು ಪಡ್ಡಾಯಿ ಪದವು ಕೈಕಂಬ ಇಲ್ಲಿ ಬಂಧುಮಿತ್ರರೊಡನೆ ನೆರವೇರಿಸಿದರು.

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.09-02-2023 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.19-01-2023 ಮತ್ತು ತಾ.16-02-2023 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.26-01-2023 ಮತ್ತು ತಾ.11-02-2023 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮಕರ ಮಾಸದ ವಿಶೇಷ ದಿನಗಳು

| | | | |
|---|---|---|---|
| 14.01.2023 | ಮಕರ ಸಂಕ್ರಮಣ | 05.02.2023 | ಹುಣ್ಣಿಮೆ |
| | ಉಡುಪಿ 3 ರಥೋತ್ಸವ | 06.02.2023 | ಶಿಶಿರ ಋತು ಮಾಘಶೀರ್ಷ |
| 15.01.2023 | ಉಡುಪಿ ಚೂರ್ಣೋತ್ಸವ | | ಮಾಸದ ಕೃಷ್ಣ ಪಕ್ಷಾರಂಭ |
| | ಉತ್ತರಾಯಣ ಆರಂಭ | 09.02.2023 | ಸಂಕಷ್ಟಹರ ಚತುರ್ಥಿ |
| 18.01.2023 | ಸರ್ವೈಕಾದಶೀ | | ಚಂದ್ರೋದಯ ರಾತ್ರಿ 9.30 |
| 21.01.2023 | ಅಮಾವಾಸ್ಯೆ | 13.02.2023 | ಕುಂಭ ಸಂಕ್ರಮಣ |
| 22.01.2023 | ಶಿಶಿರ ಋತು ಮಾಘಶೀರ್ಷ | 16.02.2023 | ಸಾರ್ತೈಕಾದಶೀ |
| | ಮಾಸದ ಶುಕ್ಲ ಪಕ್ಷಾರಂಭ | 17.02.2023 | ಭಾವೈಕಾದಶೀ |
| 01.02.2023 | ಸರ್ವೈಕಾದಶಿ | 18.02.2023 | ಮಹಾಶಿರಾತ್ರಿ |

## ಉಪನಯನ

ಶ್ರೀಮತಿ ರಮ್ಯಾ ಮತ್ತು ಶ್ರೀ ಎನ್.ಎಂ. ರಾಜಶೇಖರ ಇವರ ಪುತ್ರ ಚಿ। ಪ್ರತೀಕ್‌ನ ಬ್ರಹ್ಮೋಪದೇಶವು ತಾ. 26.12.2022 ರಂದು "ಶ್ರೀ ಸುಬ್ರಹ್ಮಣ್ಯ ಸಭಾಸದನ" ಮಂಗಳೂರಿನಲ್ಲಿ ಜರಗಿತು.

**** ****

ಶ್ರೀಮತಿ ಸುನಂದ ಮತ್ತು ಶ್ರೀ ಸಿ.ಎಸ್. ರಾವ್‌ರವರ ಮೊಮ್ಮಕ್ಕಳಾದ ಚಿ। ಸ್ಮಯನ್ (ಶ್ರೀಮತಿ ಸುಚಿತ್ರ ಮತ್ತು ಶ್ರೀ ಸಂಜಯ ರಾವ್‌ರವರ ಪುತ್ರ) ಮತ್ತು ಚಿ। ಇಲಾನ್ (ಶ್ರೀಮತಿ ಸ್ಮೃತಿ ಮತ್ತು ಶ್ರೀ ಸಿದ್ಧಾರ್ಥ ರಾವ್ ರವರ ಪುತ್ರ) ಇವರಿಬ್ಬರ ಬ್ರಹ್ಮೋಪದೇಶವು ಉಡುಪಿ ಕುಂಜಿಬೆಟ್ಟು, ಶ್ರೀ ಶಾರದಾ ಮಂಟಪದಲ್ಲಿ ತಾ.28.12.2022ರಂದು ಜರಗಿತು.

ಶ್ರೀಮತಿ ರಶ್ಮಿ ಮತ್ತು ಶ್ರೀ ಟಿ. ವಿಶ್ವನಾಥ್ ಶಾನುಭಾಗ್‌ರವರ ಪುತ್ರ ಚಿ. ಸಂಕಲ್ಪನ ಬ್ರಹ್ಮೋಪದೇಶವು ತಾ.01.01.2023ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

**** ****

ಶ್ರೀಮತಿ ಮತ್ತು ಶ್ರೀ ಗಣೇಶ್ ಪ್ರಸಾದ್ ಇವರ ಪುತ್ರ ಚಿ. ಆರವ್ ಪ್ರಸಾದನ ಬ್ರಹ್ಮೋಪದೇಶವು ತಾ.01-01-2023 ರಂದು ಮೂಡಬಿದ್ರೆಯ ಅಲಂಗಾರು ಮಹಾಲಿಂಗೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಜರಗಿತು.

**** ****

ಶ್ರೀಮತಿ ದೀಪಾ ಮತ್ತು ಶ್ರೀ ಸುಧಾಕರ ಶರ್ಮ ಬೆಳ್ಳೆ ಇವರ ಸುಪುತ್ರ ಚಿ। ಅನೀಶನಿಗೆ ಬ್ರಹ್ಮೋಪದೇಶವು ತಾ. 08-01-2023ನೇ ರವಿವಾರ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಜರಗಿತು.

## ಚಿರಮಾಂಜಲಿ



(ಜನನ : 30.12.1952) (ನಿಧನ 17.12.2022)

### ಕೋಲ್ಪೆ ದಿ। ವಿಠಲ ರಾವ್

**"ಆಡುಮುಟ್ಟದ ಸೋಗೆ ಇಲ್ಲ" ಎಂಬಂತೆ ಎಲ್ಲಾ ಕ್ಷೇತ್ರದಲ್ಲಿ ಕೈಯಾಡಿಸಿ ಅಸೌಖ್ಯದಿಂದ ತಾ.17.12.2022ರಂದು ಭಗವತ್ಪಾದ ಸೇರಿ ನಮ್ಮನ್ನೆಲ್ಲಾ ಅಗಲಿದ ಇವರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತನು ಕರುಣಿಸಲಿ**

– ಕುಟುಂಬಸ್ಥರು

# ಸನಾತನ ಧರ್ಮ ಅಜರಾಮರ : ಪುರಿಶ್ರೀ



ಸನಾತನ ಧರ್ಮ ಪುರಾತನವಾದುದು. ಅದು ಅಧ್ಯಾತ್ಮದ ಮೇಲೆ ನಿಂತಿದೆ. ಇದು ವಿಜ್ಞಾನ, ಕಲೆ, ಶಿಕ್ಷಣವನ್ನು ಕೂಡ ಒಳಗೊಂಡಿದೆ. ಹಾಗಾಗಿ ಅನಂತರ ಬಂದ ಧರ್ಮಗಳ ಪ್ರಭಾವದಿಂದ ಸನಾತನ ಧರ್ಮ ನಾಶವಾಗುವುದಿಲ್ಲ. ಇತರ ಧರ್ಮದಲ್ಲಿ ಇರುವವರು ಮೂಲತಃ ಸನಾತನ ಧರ್ಮದವರಾಗಿದ್ದವರು. ಹೊಸ ಮತಗಳು ಆರಂಭವಾದಾಗ ಅದಕ್ಕೆ ಪರಿವರ್ತನೆಯಾಗಿದ್ದಾರೆ ಆದುದರಿಂದ ಅಧ್ಯಾತ್ಮದ ತಳಹದಿಯನ್ನು ಹೊಂದಿರುವ ಸನಾತನ ಧರ್ಮ ಅಜರಾಮರವಾಗಿರುತ್ತದೆ ಎಂದು ಮಂಗಳೂರಿನ ಬಾಳಂಭಟ್ಟರ ಹಾಲ್‌ನಲ್ಲಿ ಇತ್ತೀಚೆಗೆ ನಡೆದ ತುಳುನಾಡ ಪೌರ ಸಮ್ಮಾನ ಸ್ವೀಕರಿಸಿ ಜಗದ್ಗುರು ಪುರಿ ಶಂಕರಾಚಾರ್ಯ ಶ್ರೀ ನಿಶ್ಚಲಾನಂದ ಸರಸ್ವತೀ ಸ್ವಾಮೀಜಿ ಹೇಳಿದರು.

**ಮನೆಯಲ್ಲಿಯೇ ಧರ್ಮ ಶಿಕ್ಷಣ :** ಮಕ್ಕಳು ವಿದ್ಯಾಲಯಗಳಲ್ಲಿ ವಿದ್ಯೆ ಕಲಿಯುವ ಮೊದಲು ಮನೆಯಲ್ಲಿ ಹೆತ್ತವರು ಧಾರ್ಮಿಕ ಗ್ರಂಥಗಳ ಪಾಠ ಮಾಡಬೇಕು. ಮಠ, ಮಂದಿರ, ದೇವಸ್ಥಾನಗಳಲ್ಲಿಯೂ ಧರ್ಮಶಿಕ್ಷಣ ಬೋಧಿಸಬೇಕು ಎಂದು ಸ್ವಾಮೀಜಿ ಹೇಳಿದರು. ಮೇಯರ್ ಜಯಾನಂದ ಅಂಚನ್ ನೇತೃತ್ವದಲ್ಲಿ ಸಮ್ಮಾನ ಸಮಿತಿಯ ಪ್ರಮುಖರಾದ ಪ್ರೊ| ಎಂ.ಬಿ. ಪುರಾಣಿಕ್, ಪ್ರದೀಪ ಕುಮಾರ ಕಲ್ಕೂರ, ಶರವು ರಾಘವೇಂದ್ರ ಶಾಸ್ತ್ರಿ, ಧರ್ಮದರ್ಶಿ ಹರಿಕೃಷ್ಣ ಪುನರೂರು, ಸುನೀಲ್ ಆಚಾರ್, ಗೋಪಾಲ್ ಚೆಟ್ಟಿಯಾರ್, ಚಂದ್ರಶೇಖರ ಶೆಟ್ಟಿ ಡಾ| ಸತ್ಯಕೃಷ್ಣ ಭಟ್, ಪ್ರೇಮಚಂದ್ರ ಜಾ, ಮಹೇಶ ಮೂರ್ತಿ ಸುರತ್ಕಲ್ ಮೊದಲಾದವರು ಶ್ರೀಗಳನ್ನು ಸಮ್ಮಾನಿಸಿದರು. ಡಾ| ಪ್ರಭಾಕರ ಜೋಶಿ ಸಮ್ಮಾನ ಪತ್ರ ವಾಚಿಸಿದರು. ಶ್ರೀಕಾಂತ್ ವಂದಿಸಿದರು. ಸುಧಾಕರ ರಾವ್ ಪೇಜಾವರ, ದಯಾನಂದ ಕಟೀಲು ಕಾರ್ಯಕ್ರಮ ನಿರ್ವಹಿಸಿದರು.

ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಜಗದ್ಗುರುಗಳಿಗೆ ಫಲ ಸಮರ್ಪಿಸಿ ಪ್ರಸಾದ ಪಡೆಯಲಾಯಿತು. ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೆ. ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿ ಕೃತಾರ್ಥರಾದರು. ಕೋಶಾಧಿಕಾರಿ ಶ್ರೀ ಪಿ.ಶ್ರೀಕಾಂತ ರಾವ್ ಜಗದ್ಗುರುಗಳ ಸ್ವಾಗತ, ಮೊಕ್ಕಾಂ ಕಾರ್ಯಕ್ರಮಗಳ ವ್ಯವಸ್ಥೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

## ಧರ್ಮಾಧಿಕಾರಿ ಶ್ರೀ ಬೊಳ್ಳಾವ ಸತ್ಯಶಂಕರ ಅಭಿನಂದನಾ ಸಮಿತಿ

**ಭಾರತೀ ತೀರ್ಥ ಕೃಪಾ, ಕೋಟೆಕಾರು, ಮಂಗಳೂರು – 575022**



ಕಳೆದ 40 ವರ್ಷಗಳಿಂದ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರನ್ನು ಮಾತ್ರವಲ್ಲದೆ ಇತರ 50 ಶಿಷ್ಯ ಸಮುದಾಯದವರನ್ನು ಶ್ರೀ ಶ್ರೀ ಜಗದ್ಗುರುಗಳ ಪ್ರತೀ ಚಾತುರ್ಮಾಸ ಸಂದರ್ಭದಲ್ಲಿ ಕರೆದೊಯ್ಯುವ ವ್ಯವಸ್ಥೆಯನ್ನು ಬೊಳ್ಳಾವ ಸತ್ಯಶಂಕರರವರು ನಡೆಸುತ್ತಿದ್ದಾರೆ. ಅವರ ಅಧಮ್ಯ ಸಾಧನೆಯನ್ನು ಗುರುತಿಸಿ "ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಪುರಸ್ಕಾರ್" ಎಂಬ ಪುರಸ್ಕಾರವನ್ನು ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ನೀಡಿ ಅನುಗ್ರಹಿಸಿರುತ್ತಾರೆ. ಶೃಂಗೇರಿ ಧರ್ಮಾಧಿಕಾರಿಗಳಾದ ಶ್ರೀ ಬೊಳ್ಳಾವ ಸತ್ಯಶಂಕರ ರವರ ಜೀವಮಾನದ ಸಾಧನೆಯನ್ನು ಗುರುತಿಸಿ, ಉಡುಪಿ, ದಕ್ಷಿಣ ಕನ್ನಡ ಹಾಗೂ ಕಾಸರಗೋಡು ಜಿಲ್ಲೆಯ ಶ್ರೀ ಶೃಂಗೇರಿ ಮಠದ ಶಿಷ್ಯವರ್ಗದವರು ಶ್ರೀ ಶೃಂಗೇರಿ ಮಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಆಡಳಿತಾಧಿಕಾರಿಗಳಾದ ಪದ್ಮಶ್ರೀ ಪುರಸ್ಕೃತ ಡಾ.ವಿ.ಆರ್. ಗೌರಿಶಂಕರರವರ ಗೌರವಾಧ್ಯಕ್ಷತೆಯಲ್ಲಿ "ಧರ್ಮಾಧಿಕಾರಿ ಶ್ರೀ ಬೊಳ್ಳಾವ ಸತ್ಯಶಂಕರ ಅಭಿನಂದನಾ ಸಮಿತಿ"ಯನ್ನು ರಚಿಸಲಾಗಿದೆ.

ಮಂಗಳೂರು ಕೋಟೆಕಾರಿನ ಶ್ರೀ ಶೃಂಗೇರಿ ಮಠದಲ್ಲಿ ಶ್ರೀ ಮಠದ ಸುಮಾರು 50 ಸಮುದಾಯಗಳ ಶಿಷ್ಯವರ್ಗದವರು ಒಟ್ಟು ಸೇರಿ ಅವರನ್ನು ಸಂಮಾನಿಸಲು ಹಾಗೂ ಅದರ ಸವಿನೆನಪಿಗಾಗಿ "ಅಭಿನಂದನಾ" ಗ್ರಂಥವನ್ನು ಹೊರತರಲು ತೀರ್ಮಾನಿಸಲಾಗಿದೆ.

ಕಾರ್ಯಕ್ರಮವು 2023ರ ಜನವರಿ ತಿಂಗಳ ತಾರೀಕು 21 ಮತ್ತು 22ನೇ ಶನಿವಾರ ಹಾಗೂ ಭಾನುವಾರಗಳಂದು ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ವಿಚಾರ ಗೋಷ್ಠಿಗಳೊಂದಿಗೆ ಜರಗಲಿದೆ.

ಈ ಅಭಿನಂದನಾ ಕಾರ್ಯಕ್ರಮದಲ್ಲಿ ತಾವೆಲ್ಲರೂ ಪ್ರೀತಿಯಿಂದ ಪಾಲ್ಗೊಳ್ಳಬೇಕಾಗಿ ಅಭಿನಂದನಾ ಸಮಿತಿಯ ಅಧ್ಯಕ್ಷರಾದ ಎಂ.ಆರ್. ವಾಸುದೇವರು ವಿನಂತಿಸಿಕೊಂಡಿದ್ದಾರೆ.

# ಪ್ರೊಫೆಸರ್ ಶರತ್ ರಾವ್ ಅವರಿಗೆ ಪದೋನ್ನತಿ



ಕಾರ್ಕಳದ ಪ್ರೊಫೆಸರ್ ಸೂರ್ಯನಾರಾಯಣ ರಾವ್ ಅವರ ಪುತ್ರ ಕೆಎಮ್‌ಸಿ ಮಣಿಪಾಲದ ಪ್ರಖ್ಯಾತ ಆರ್ಥೋಪೆಡಿಕ್ ವೈದ್ಯರೂ, ಕೆಎಮ್‌ಸಿಯ ಡೀನ್ ಆಗಿ ಕಾರ್ಯನಿರ್ವಹಿಸಿತ್ತಿರುವ ನಮ್ಮ ಸಮಾಜದವರಾದ ಪ್ರೊಫೆಸರ್ ಶರತ್ ರಾವ್‌ರವರು ಕೆಎಮ್‌ಸಿ ಮಾಹೆಯ ಪ್ರೋವೈಸ್ ಚಾನ್ಸಲರ್ ಆಗಿ ಪದೋನ್ನತಿ ಗೊಂಡಿದ್ದಾರೆ. ಅವರಿಗೆ ಶ್ರೀಶಾರದಾ ಅಭಿನಂದನೆಗಳು.

# ಡಾ. ಅವನೀಂದ್ರನಾಥ್ ರಾವ್ ಅವರಿಗೆ ಲಿಂಗಯಾಸ್ ವಿಶ್ವವಿದ್ಯಾಲಯದ ಪ್ರಶಸ್ತಿ



ದೆಹಲಿಯ ಕೇಂದ್ರ ಸಂಸ್ಕೃತಿ ಮಂತ್ರಾಯಲದ ಹಿರಿಯ ಅಧಿಕಾರಿ, ಸಾಹಿತಿ ಡಾ. ಅವನೀಂದ್ರನಾಥ್ ರಾವ್ ಅವರು ಪ್ರತಿಷ್ಠಿತ ಲಿಂಗಯಾಸ್ ವಿದ್ಯಾಪೀಠ ವಿಶ್ವವಿದ್ಯಾಲಯದ ಭಾರತೀಯ ಕೌಶಲ ಪ್ರಶಸ್ತಿ ಪಡೆದಿದ್ದಾರೆ. ದೆಹಲಿಯಲ್ಲಿ ದಿನಾಂಕ 18.12.2022 ರಂದು ನಡೆದ ಸಮಾರಂಭದಲ್ಲಿ ಭಾರತ ಸರಕಾರದ ಚರಣ್ ಸಿಂಗ್ ರಾಷ್ಟ್ರೀಯ ಕೃಷಿ ಸಂಸ್ಥೆಯ ನಿರ್ದೇಶಕ ಡಾ. ರಮೇಶ್ ಮಿತ್ತಲ್ ಪ್ರಶಸ್ತಿ ಪ್ರಧಾನ ಮಾಡಿದರು. ಡಾ. ರಾವ್ ಅವರು ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗಕ್ಕೆ ನೀಡಿದ ಕೊಡುಗೆಗಳಿಗೆ ಈ ಗೌರವ ಲಭಿಸಿದೆ. ಅವರು ಉಡುಪಿ ಜಿಲ್ಲೆಯ ಎಲ್ಲೂರಿನವರು. ಯು.ಪಿ ಸರಕಾರದ ಐಇಡಿ ಸಂಸ್ಥೆಯ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

# ವಸತಿ, ವಾಣಿಜ್ಯ ಸಮುಚ್ಚಯ ‘ಪ್ರತೀಕ್ ಪ್ರೈಮ್’ ಉದ್ಘಾಟನೆ



ಭಾರತ್ ಇನ್‌ಫ್ರಾಟೆಕ್ ಸಂಸ್ಥೆಯ ಪ್ರತಿಷ್ಠಿತ ಯೋಜನೆಯಾದ ಉಡುಪಿಯ ವಿದ್ಯಾರಣ್ಯ ಮಾರ್ಗದ ಸಿಟಿ ಹಾಸ್ಪಿಟಲ್ ಬಳಿಯ ಕಾಡಬೆಟ್ಟುವಿನಲ್ಲಿ ನಿರ್ಮಿಸಲಾದ ‘ಪ್ರತೀಕ್ ಪ್ರೈಮ್’ ವಸತಿ ಮತ್ತು ವಾಣಿಜ್ಯ ಸಮುಚ್ಚಯವನ್ನು ಬುಧವಾರ ಉಜ್ವಲ್ ಡೆವಲಪರ್ಸ್‌ನ ಎಂ.ಡಿ. ಪುರುಷೋತ್ತಮ ಪಿ. ಶೆಟ್ಟಿ ಉದ್ಘಾಟಿಸಿದರು.

ಅಧ್ಯಕ್ಷತೆ ವಹಿಸಿದ್ದ ನ್ಯಾಯವಾದಿ ಲಕ್ಷ್ಮಣ್ ಶೆಣೈ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಕಟ್ಟಡ ನಿರ್ಮಿಸುವುದು ಸವಾಲಿನ ಕೆಲಸ. ಅದರ ನಡುವೆಯೂ ಹತ್ತು ಗುಣಾತ್ಮಕ ಕಟ್ಟಡಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ ಪ್ರಫುಲ್ಲಚಂದ್ರ ರಾವ್ ಅವರ ಪರಿಶ್ರಮ ಅಪರಿಮಿತ. ನಿಗದಿತ ಸಮಯದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಅಳವಡಿಸುವ ಮೂಲಕ ಗ್ರಾಹಕರಿಗೆ ಬೇಕಾದಂತೆ ಒದಗಿಸುವುದು ಸುಲಭದ ಮಾತಲ್ಲ. ಈ ಸಂಸ್ಥೆಯಿಂದ ಇನ್ನಷ್ಟು ಕಟ್ಟಡಗಳು ನಿರ್ಮಾಣಗೊಂಡು ಜನರಿಗೆ ಅನುಕೂಲವಾಗಿ ನಗರದ ಬೆಳವಣಿಗೆಗೆ ಕೊಡುಗೆ ನೀಡಲಿ, ಈ ಮೂಲಕ ಪ್ರಫುಲ್ಲಚಂದ್ರರ ಕನಸು ನನಸಾಗಲಿ ಎಂದು ಹಾರೈಸಿದರು. ದೀಪ ಬೆಳಗಿದ ಶ್ರೀ ಶಾರದಾ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಸದಾನಂದ ರಾವ್ ಚಿಟ್ಪಾಡಿ ಅವರು, ಸಮಾಜಕ್ಕೆ ಒಳಿತನ್ನು ಮಾಡುವ ಉದ್ದೇಶದಿಂದ ನಿರ್ಮಿಸಲ್ಪಟ್ಟ ಕಟ್ಟಡಗಳಿಂದ ಸೂರಿಲ್ಲದವರಿಗೆ ಸೂರು ದೊರಕಿರುವುದರೊಂದಿಗೆ ಸ್ವಂತ ಮನೆಯ ಕನಸು ಕಂಡ ಅದೆಷ್ಟೋ ಮಂದಿಯ ಕನಸು ನನಸಾಗಲು ಸಂಸ್ಥೆ ಕಾರಣವಾಗಿದೆ ಎಂದರು.

ಡಾ| ಅಡೂರು ಸಂತೋಷ್ ಕುಮಾರ್ ಶುಭಾಶಂಸನೆಗೈದರು. ಉದ್ಯಮಿ ವಿಶ್ವನಾಥ ಶೆಣೈ, ಭಾರತ್ ಇನ್‌ಫ್ರಾಟೆಕ್ ಸಂಸ್ಥೆಯ ಪ್ರವರ್ತಕಿ ಪೂರ್ಣಿಮಾ ಪ್ರಫುಲ್ಲಚಂದ್ರ ರಾವ್, ಎಂಜಿನಿಯರ್ ಅರ್ಪಿತಾ ಪ್ರತೀಕ್ ರಾವ್ ಉಪಸ್ಥಿತರಿದ್ದರು.

ಎಂಜಿನಿಯರ್ ಚೇತನ್ ನೈಲಾಡಿ ಸ್ವಾಗತಿಸಿ, ನಿವೃತ್ತ ಎಂಜಿನಿಯರ್ ಉಮೇಶ್ ರಾವ್ ಪ್ರಸ್ತಾವನೆಗೈದರು. ಕೃಷ್ಣ ಕುಮಾರ್ ರಾವ್ ಮಟ್ಟು ನಿರೂಪಿಸಿ, ಪ್ರವರ್ತಕ ಎಂಜಿನಿಯರ್ ಪ್ರತೀಕ್ ರಾವ್ ವಂದಿಸಿದರು.

ಕಾಡಬೆಟ್ಟುವಿನ ಪ್ರಶಾಂತ ವಾತಾವರಣ ದಲ್ಲಿರುವ ಪ್ರತೀಕ್ ಪ್ರೈಮ್ ಸಮುಚ್ಚಯ ದಲ್ಲಿ ವಸತಿ ಮತ್ತು ವಾಣಿಜ್ಯ ಮಳಿಗೆಗಳಿದ್ದು, ಗ್ರಾಹಕರ ಅಗತ್ಯಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಒಳಗೊಂಡಿದೆ. ಬಸ್ ನಿಲ್ದಾಣ, ಶಾಪಿಂಗ್ ಸೆಂಟರ್, ಮಾರುಕಟ್ಟೆ ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆಗಳಿಗೆ ಸಮೀಪ ದಲ್ಲಿದ್ದು, ನಗರದಿಂದ ಸುಮಾರು 2–5 ನಿಮಿಷಗಳ ಕಾಲ್ನಡಿಗೆ ದೂರದಲ್ಲಿದೆ. ಉಡುಪಿಯ ಏಸ್ ಟೆಕ್ನೋಕ್ರಾಟ್ಸ್ ಪ್ರೈ.ಲಿ. ನ ವಿನ್ಯಾಸದೊಂದಿಗೆ ಕಟ್ಟಡ ನಿರ್ಮಿಸ ಲಾಗಿದೆ. ಮಾಹಿತಿ ಮತ್ತು ಬುಕ್ಕಿಂಗ್‌ಗೆ ವೆಬ್‌ಸೈಟ್ www.bharathinfratech.com ಸಂಪರ್ಕಿಸಬಹುದು.

**ಸಂಸ್ಥೆಯ ಮುಂದಿನ ಯೋಜನೆಯಾಗಿ ನಗರದ ಹರಿಶ್ಚಂದ್ರ ಮಾರ್ಗದಲ್ಲಿ ‘ಶಿವಾನ್ಸ್’ 2 ಮತ್ತು 3 ಬಿ.ಎಚ್.ಕೆ. ಲಕ್ಸುರಿ ಅಪಾರ್ಟ್‌ಮೆಂಟ್ ನಿರ್ಮಾಣಗೊಳ್ಳಲಿದೆ.**

## ಧೀರಜ್–ವೈ.ಡಿ.ಆರ್–81ನೇ ಕಾರು ಲಾಂಚಿಂಗ್ ಕಾರ್ಯಕ್ರಮ



ಮೋದಿಕೇರ್ ರಾಕಿಂಗ್ ಚ್ಯಾಂಪಿಯನ್ಸ್ ವತಿಯಿಂದ ಉಡುಪಿ ಬ್ರಹ್ಮಗಿರಿ ನಿವಾಸಿ ವೈ. ಮೋಹನ್ ರಾವ್ ಇವರ ಪುತ್ರ, ಬೆಂಗಳೂರಿನ ಸಾಫ್ಟ್‌ವೇರ್ ಇಂಜಿನಿಯರ್ ಧೀರಜ್–ವೈ.ಡಿ.ಆರ್ ಇವರ 81ನೇ ಕಾರು ಲಾಂಚಿಂಗ್ ಕಾರ್ಯಕ್ರಮವು ಕುಂಜಿಬೆಟ್ಟು ಶ್ರೀಶಾರದಾ ಮಂಟಪದ ಜ್ಞಾನ ಮಂದಿರದಲ್ಲಿ ಯಶಸ್ವಿಯಾಗಿ ಸಂಪನ್ನಗೊಂಡಿತು. ರವೀಂದ್ರ ಶ್ರೀಯಾನ್ (TBD.SMAC Member) ಮುಖ್ಯ ಅತಿಥಿಯಾಗಿ ಮತ್ತು ಶ್ರೀಮತಿ ನೀತಾ ಕೆ. ನಾಯ್ಕ್ (BDD) ಉತ್ತಮ ರೀತಿಯಲ್ಲಿ ಕಾರ್ಯಕ್ರಮವನ್ನು ನೆರವೇರಿಸಿದರು. ಟಾಪ್ ಲೀಡರ್ ಆದ ನವೋದ್ ಸಾರ್ (BDD) ಕಾರ್ಯಕ್ರಮ ನಿರೂಪಣೆ ಮಾಡಿ ಕಾರ್ಯಕ್ರಮದ ಮುಖ್ಯ ಪಾತ್ರವನ್ನು ವಹಿಸಿದರು. ಪಾರ್ಟ್ನರ್ ಆದ ಪ್ರಕಾಶ ಭಾಗವತ್ (DD) ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಎಲ್ಲಾ ಮಿಲಿಯನರ್ ಲೀಡರ್‌ಗಳು ಕಾರ್ಯಕ್ರಮಕ್ಕೆ ಬಂದು ಶುಭ ಹಾರೈಸಿದರು. ಧೀರಜ್‌ರವರ ಇತರ ಪಾರ್ಟ್ನರ್ಸ್ ಶುಭಕಾಮನೆಗಳನ್ನು ಹಾರೈಸಿದರು. ಜೈ ಮೋದಿಕೇರ್. ಜೈ ಹಿಂದ್.




**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**

1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.


## ವೈವಾಹಿಕ ಜೀವನದ ಸುವರ್ಣ ಸಂಭ್ರಮ



### ಶ್ರೀ ಸರ್ವೋತ್ತಮ ರಾವ್ ಚಿಟ್ಪಾಡಿ ಹಾಗೂ ಶ್ರೀಮತಿ ಸುನಂದಾ ಸಿ.ಎಸ್.ರಾವ್

ತಾ.30.12.2022ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ತಮ್ಮ ವೈವಾಹಿಕ ಜೀವನದ ಸುವರ್ಣ ಸಂಭ್ರಮವನ್ನು ಆಚರಿಸಿಕೊಂಡ ನಮ್ಮ ಮಾತಾ ಪಿತರಿಗೆ

–: ಶುಭ ಕೋರುವ :–

ಶ್ರೀ ಸಂಜಯ ರಾವ್ ಮತ್ತು ಶ್ರೀಮತಿ ಸುಚಿತ್ರಾ ರಾವ್
ಶ್ರೀ ಸಿದ್ದಾರ್ಥ್ ರಾವ್ ಮತ್ತು ಶ್ರೀಮತಿ ಸ್ಮೃತಿ ರಾವ್
ಕು। ಸಿಂಚನಾ ರಾವ್, ಕು। ಉಮಿಕಾ ರಾವ್, ಚಿ। ಸ್ಮಯನ್ ರಾವ್, ಚಿ। ಇಲಾನ್ ರಾವ್

ಶ್ರೀಮತಿ ಮತ್ತು ಶ್ರೀ ಮೋಹನ್ ರಾವ್
ಶ್ರೀಮತಿ ಮತ್ತು ಶ್ರೀ ರಮೇಶ್ ರಾವ್ ಹಾಗೂ ಸಹೋದರಿಯರು
ನಾಗವೇಣಿಯಮ್ಮ ಮತ್ತು ಮಕ್ಕಳು

## ಬ್ರಹ್ಮೋಪದೇಶ



### ಚಿ। ಸ್ಮಯನ್ ಮತ್ತು ಚಿ। ಇಲಾನ್

ತಾ.28.12.2022ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ಶ್ರೀಮತಿ ಸುಚಿತ್ರಾ ಮತ್ತು ಶ್ರೀ ಸಂಜಯ ರಾವ್ ಇವರ ಪುತ್ರ ಚಿ। ಸ್ಮಯನ್ ಮತ್ತು ಶ್ರೀಮತಿ ಸ್ಮೃತಿ ಮತ್ತು ಶ್ರೀ ಸಿದ್ದಾರ್ಥ್ ರಾವ್ ಇವರ ಪುತ್ರ ಚಿ। ಇಲಾನ್ ಇವರ ಬ್ರಹ್ಮೋಪದೇಶಕ್ಕೆ ಆಗಮಿಸಿ, ವಟುವನ್ನು ಹರಸಿದ ತಮಗೆಲ್ಲರಿಗೂ ಕೃತಜ್ಞತೆಗಳು

–: ಶುಭ ಕೋರುವ :–

ಶ್ರೀಮತಿ ಮತ್ತು ಶ್ರೀ ಮೋಹನ್ ರಾವ್ ಹಾಗೂ ಸಹೋದರ, ಸಹೋದರಿಯರು
ಶ್ರೀಮತಿ ಮತ್ತು ಶ್ರೀ ಸುಜಿತ್, ಶ್ರೀಮತಿ ಶಾರದಾ ಹಾಗೂ ಶ್ರೀ ಶ್ರೀಕಂಠ ರಾವ್, ಶೃಂಗೇರಿ
ಶ್ರೀ ಸುವೀರ್, ಶ್ರೀಮತಿ ಡಾ। ಸುಮಿತ್ರಾ ಮತ್ತು ಶ್ರೀ ಜನಾರ್ಧನ ರಾವ್, ಬೆಂಗಳೂರು
ಶ್ರೀಮತಿ ಸುನಂದ ಮತ್ತು ಶ್ರೀ ಸಿ.ಎಸ್.ರಾವ್, ಕು। ಸಿಂಚನಾ ರಾವ್, ಕು। ಉಮಿಕಾ ರಾವ್


With Best Compliments From :

BUILDING DREAMS, ENHANCING LIVES.



NAKSHATRA
GANDHINAGAR



SOLITAIRE
HATHILL,



HABITAT ONE 54
An Urban Lifestyle
DEREBAIL



ANANTESSH
CAR STREET,

Land Trades®
BUILDERS & DEVELOPERS
BUILDING TRUST, DELIVERING VALUE

MANGALURU'S
LEADING REAL ESTATE COMPANY
RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in
Follow us on :


Printed & Published by : Sri P. Prabhakara Bhandi onbehalf of Sri Sthanika Brahmana Sangha (R.), Printed at SriNidhi Graphic Tech, D.No.8-7A1-12, Ground Floor, Shambhavi Crytal Biz Hub, Near D.C. Office, Manipal-576104, Karnataka. Published at Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar, Udupi.
Ph : 0820-2958444, E-mail : srisharadaudupi@gmail.com Website : www.srisharada.org